ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 8ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ: 04-08-2009ನೇ ಮಂಗಳವಾರ,

ಸಂಜೆ 4.00 ಗಂಟೆಗೆ

ಸ್ಥಳ:

ಕೊಠಡಿ ಸಂಖ್ಯೆ: 237, ಎರಡನೇ ಮಹಡಿ,

ವಿಧಾನ ಸೌಧ, ಬೆಂಗಳೂರು

# HASSAN INSTITUTE OF MEDICAL SCIENCES, HASSAN

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ , ಹಾಸನ.

(An Autonomous Medical Institution, Government of Karnataka)
Sri Chamarajendra Hospital Campus, Hassan -573 201
Website:www.hims-hassan.org Phone/Fax No. 08172-231699, 231599

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 8ನೇ ಆಡಳಿತ ಮಂಡಳಿ ಸಭೆಯನ್ನು ಸನ್ಮಾನ್ಯ ರಾಮಚಂದ್ರಗೌಡ, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ, ಹಿಮ್ಸ್ , ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ದಿನಾಂಕ:04-08-2009ರ ಮಂಗಳವಾರ, ಸಂಜೆ:4.00 ಗಂಟೆಗೆ ಕೊಠಡಿ ಸಂಖ್ಯೆ: 237, 2ನೇಮಹಡಿ, ವಿಧಾನಸೌಧ, ಬೆಂಗಳೂರು, ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು

<u>ಹಾಜರಿದ್ದ ಗೌರವಾನ್ವಿತ ಸದಸ್ಯರುಗಳು</u>:

| | | | |
|---|---|---|---|
| 1 | **ಸನ್ಮಾನ್ಯ ರಾಮಚಂದ್ರಗೌಡ,**<br>ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,<br>ಕರ್ನಾಟಕ ಸರ್ಕಾರ,<br>ವಿಧಾನ ಸೌಧ, ಬೆಂಗಳೂರು. | | **ಅಧ್ಯಕ್ಷರು** |
| 2 | **ಶ್ರೀ. ವಿ. ಉಮೇಶ್ , ಭಾ.ಆ.ಸೇ.**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>( ವೈದ್ಯಕೀಯ ಶಿಕ್ಷಣ),<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,<br>ವಿಧಾನ ಸೌಧ, ಬೆಂಗಳೂರು. | | **ಉಪಾಧ್ಯಕ್ಷರು** |
| 3 | **ಶ್ರೀ ಗಣೇಶ್ ಮೂರ್ತಿ**<br>ಸರ್ಕಾರದ ಉಪ ಕಾರ್ಯದರ್ಶಿ,<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪರವಾಗಿ,<br>ಆರ್ಥಿಕ ಇಲಾಖೆ,<br>ವಿಧಾನ ಸೌಧ, ಬೆಂಗಳೂರು. | | **ಸದಸ್ಯರು** |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 4 | **ಶ್ರೀ.ಪಿ.ಎನ್. ಶ್ರೀನಿವಾಸಚಾರಿ, ಭಾ.ಆ.ಸೇ,**<br>ಆಯುಕ್ತರು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ.<br>ಅನಂದ ರಾವ್ ವೃತ್ತ ,<br>ಬೆಂಗಳೂರು. | | ಸದಸ್ಯರು |
| 5 | **ಶ್ರೀ ಅನೀಸ್ ಸಿರಾಜ್.ಎಸ್.**<br>ಸರ್ಕಾರದ ಅಪರ ಕಾರ್ಯದರ್ಶಿ,<br>ವೈದ್ಯಕೀಯ ಶಿಕ್ಷಣ,<br>ಆರೋಗ್ಯ ಮತ್ತುಕುಟುಂಬ ಕಲ್ಯಾಣ ಇಲಾಖೆ,<br>ವಿಕಾಸ ಸೌಧ,<br>ಬೆಂಗಳೂರು. | | ಸದಸ್ಯರು |
| 6 | **ಡಾ. ಅರುಣ .ಎ.ಆರ್.**<br>ನಿರ್ದೇಶಕರು,<br>ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,<br>ಆನಂದರಾವ್ ವೃತ್ತ,<br>ಬೆಂಗಳೂರು. | | ಸದಸ್ಯರು |
| 7 | **ಶ್ರೀ ಸಿ.ಪಿ. ಪಾಟೀಲ್**<br>ಅಧೀಕ್ಷಕ ಅಭಿಯಂತರರು,<br>ಮುಖ್ಯ ಅಭಿಯಂತರರ ಪರವಾಗಿ,<br>ಸಿ & ಬಿ, ಬೆಂಗಳೂರು. | | ಸದಸ್ಯರು |
| 8 | **ಶ್ರೀ. ನವೀನ್ ರಾಜ್ ಸಿಂಗ್, ಭಾ.ಆ.ಸೇ**<br>ಜಿಲ್ಲಾಧಿಕಾರಿಗಳು ,<br>ಹಾಸನ ಜಿಲ್ಲೆ, ಹಾಸನ. | | ಸದಸ್ಯರು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 9 | **ಡಾ. ಡಿ. ಪ್ರೇಮ್ ಕುಮಾರ್,**<br>ವೈದ್ಯಕೀಯ ಅಧೀಕ್ಷಕರು,<br>ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆ,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,ಹಾಸನ. | | ಸದಸ್ಯರು |
| 10 | **ಶ್ರೀ. ಎಂ. ವೆಂಕಟೇಶ್ ಗೌಡ,**<br>ಮುಖ್ಯ ಆಡಳಿತಾಧಿಕಾರಿಗಳು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,<br>ಹಾಸನ. | | ಸದಸ್ಯರು |
| 11 | **ಶ್ರೀ . ಶ್ರೀನಿವಾಸ ಗೌಡ,**<br>ಆರ್ಥಿಕ ಅಧಿಕಾರಿಗಳು,<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,<br>ಹಾಸನ. | | ಸದಸ್ಯರು |
| 12 | **ಡಾ.ಕೆ.ಎಸ್. ಗಂಗಾಧರ**<br>**ನಿರ್ದೇಶಕರು**<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ,<br>ಹಾಸನ. | | **ಸದಸ್ಯ ಕಾರ್ಯದರ್ಶಿಗಳು** |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:05-08-2008ರಂದು ನಡೆದ ಆಡಳಿತ ಮಂಡಳಿ ಸಭಾ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:05-08-2008ರಂದು ನಡೆದ ಆಡಳಿತ ಮಂಡಳಿ ಸಭಾ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 2 | ದಿನಾಂಕ:16-07-2009ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು (ವೈ.ಶಿ) ಇವರ ಅಧ್ಯಕ್ಷತೆಯಲ್ಲಿ ನಡೆದ ಮೂರನೆ ಆರ್ಥಿಕ ಸಮಿತಿಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು ಹಾಗೂ ಸಭಾ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:16-07-2009ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು(ವೈ.ಶಿ) ಇವರ ಅಧ್ಯಕ್ಷತೆಯಲ್ಲಿ ನಡೆದ ಮೂರನೆ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು. ಹಾಗೂ ಸಭಾ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 3 | 2007-08ನೇ ಸಾಲಿನ ಸಂಸ್ಥೆಯ ಆಡಿಟ್‌ವರದಿಯನ್ನು ಅಂಗೀಕರಿಸುವುದು. | ದಿನಾಂಕ:16-07-2009ರಂದು ನಡೆದ ಆರ್ಥಿಕ ಸಮಿತಿ ಸಭೆಯಲ್ಲಿ 2007-08ನೇ ಸಾಲಿನ ಆಡಿಟ್ ವರದಿಯನ್ನು ಒಪ್ಪಿ ಅನುಮೋದಿಸಿರುವುದನ್ನು ಗೌರವಾನ್ವಿತ ಆಡಳಿತ ಮಂಡಳಿ ಸಭೆಯಲ್ಲಿ ಓದಿ ಅಂಗೀಕರಿಸಲಾಯಿತು. |
| 4 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎರಡನೇ ಹಂತದ ಕಾಮಗಾರಿ ಪ್ರಗತಿಯ ಬಗ್ಗೆ. | ಅ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಎರಡನೇ ಹಂತದ ಸಿವಿಲ್ ಕಾಮಗಾರಿಗೆ ರೂ. 400.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರಕಿದ್ದು, ಇದರಲ್ಲಿ ಗುತ್ತಿಗೆದಾರರಾದ ಮೆ.ನಾಗಾರ್ಜುನ ಕನ್ಸ್ ಸ್ಟ್ರಕ್ಷನ್, ಪ್ರೈ.ಲಿಮಿಟೆಡ್, ಬೆಂಗಳೂರುರವರಿಗೆ ಈಗಾಗಲೇ ರೂ.3608.00ಲಕ್ಷಗಳನ್ನು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
| --- | --- | --- |
| | | ಪಾವತಿಸಲಾಗಿದೆ. ಎರಡನೇ ಹಂತದ ಅಂತಿಮ ಬಿಲ್ ಸುಮಾರು ರೂ.200.00ಲಕ್ಷಗಳನ್ನು ಪಾವತಿಸಲು ಬಾಕಿ ಇರುತ್ತದೆ. ಕಾಮಗಾರಿಯ ಗುಣಮಟ್ಟವು ತೃಪ್ತಿಕರವಾಗಿರುತ್ತದೆಂದು ಅಧೀಕ್ಷಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಒಳನಾಡು ಮತ್ತು ಜಲಸಾರಿಗೆ ವಿಭಾಗ, ಹಾಸನ ವೃತ್ತರವರು ಸಭೆಗೆ ವರದಿಯನ್ನು ಮಂಡಿಸಿದರು. ಇಲಾಖಾಧಿಕಾರಿಯವರ ವರದಿಯನ್ನು ಒಪ್ಪಿ ಅಂಗೀಕರಿಸಲಾಯಿತು.<br>ಆ) ಲಿಫ್ಟ್ ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಮೊತ್ತ ರೂ.373.90ಲಕ್ಷಗಳ ಉಪ ಅಂದಾಜಿಗೆ ಮುಖ್ಯ ಇಂಜಿನಿಯರ್‌ರವರು ತಾಂತ್ರಿಕ ಅನುಮೋದನೆ ನೀಡಿ ಟೆಂಡರ್ ಕಾರ್ಯಾದೇಶ ಸಂಖ್ಯೆ: 51/07-08ರಲ್ಲಿ ರೂ.411.32 ಲಕ್ಷಗಳಿಗೆ ಅಂದರೆ ಶೇಕಡ 12ರಷ್ಟು ಹೆಚ್ಚುವರಿ ಮೊತ್ತಕ್ಕೆ ಕಾರ್ಯದೇಶವನ್ನು ನೀಡಿ ಲೋಕೋಪಯೋಗಿ ಇಲಾಖೆಯ ಮುಖಾಂತರ ಟೆಂಡರ್ ನೀಡಲಾಗಿರುತ್ತದೆ. ಆದರೆ ಕಾಮಗಾರಿಯನ್ನು ಕೈಗೊಳ್ಳುವ ಸಮಯದಲ್ಲಿ ಚೆಸ್ಕಾಂ ಅಧಿಕಾರಿಗಳ ಸೂಚನೆ ಮೇರೆಗೆ ಕೆಲವು ಬದಲಾವಣೆಯಾಗಿರುವುದರಿಂದ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಕೈಗೊಳ್ಳಲು ರೂ. 491.95 ಲಕ್ಷಗಳು ಅವಶ್ಯಕವಾಗಿ ಬೇಕಾಗಿರುತ್ತದೆ ಎಂದು ಮುಖ್ಯ ಇಂಜಿನಿಯರ್ ಸಂಪರ್ಕ ಮತ್ತು ಕಟ್ಟಡಗಳು ದಕ್ಷಿಣ ಕೆ.ಆರ್. ವೃತ್ತ, ಬೆಂಗಳೂರುರವರು 4-12-2008ರ ಪತ್ರದಲ್ಲಿ ತಿಳಿಸಿರುವುದರಿಂದ ಹೆಚ್ಚುವರಿ ಬಾಬ್ತಿನ ಮೊತ್ತವಾದ ರೂ.118.05ಲಕ್ಷಗಳ ಹೆಚ್ಚುವರಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಅವಶ್ಯಕತೆಯ ಬಗ್ಗೆ ಚರ್ಚಿಸಲಾಯಿತು. ಎರಡು ಲಿಫ್ಟ್‌ಗಳು ಮತ್ತು ಒಂದು Transformer Stationಗಳು ಮೂಲ ಅಂದಾಜಿನಲ್ಲಿ ಸೇರದಿದ್ದರೂ ಸಹ ಕಾಮಗಾರಿ ಅವಶ್ಯಕತೆಯನ್ನು ಪರಿಗಣಿಸಿ ಈ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. ಲಿಫ್ಟ್ ಕಾಮಗಾರಿಯ EIRL& Work Slip ಅಂಶಗಳನ್ನು ಕಾರ್ಯಪಾಲಕ ಅಭಿಯಂತರರು(ವಿ), ಲೋಕೋಪಯೋಗಿ ಇಲಾಖೆ, ಹಾಸನ ವೃತ್ತ, ಹಾಸನರವರು ಪರಿಶೀಲಿಸಿರುವುದಾಗಿ ತಿಳಿಸಿ ಕಾಮಗಾರಿಯು ಉತ್ತಮ ಗುಣಮಟ್ಟದಾಗಿದ್ದು ಯಾವುದೇ ಲೋಪಗಳಿರುವುದಿಲ್ಲ ಎಂದು ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಈ ಕಾರ್ಯವನ್ನು ಪರಿಶೀಲಿಸಿದ್ದು ಕಾಮಗಾರಿಯು ತೃಪ್ತಿಕರವಾಗಿದೆ ಎಂದು ತಿಳಿಸಿದರು. ಎಲ್ಲ ವಿಷಯಗಳನ್ನು ಕೂಲಂಕುಷವಾಗಿ ಚರ್ಚಿಸಿ ವರದಿಯನ್ನು ಒಪ್ಪಿ ಹೆಚ್ಚುವರಿ ಬಿಲ್ ಬಾಬ್ತಿಗೆ ಅನುಮೋದನೆ ನೀಡಲಾಯಿತು. ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅಗತ್ಯ ಅನುದಾನ ಪಡೆಯುವಂತೆ ತೀರ್ಮಾನಕ್ಕೈಗೊಳ್ಳಲಾಯಿತು. |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ಕ್ರಮ : ನಿರ್ದೇಶಕರು, ಹಿಮ್ಸ್,ಹಾಸನ. |
| 5 | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಹಾಗೂ ಸಂಸ್ಥೆಯ ಅಗತ್ಯತೆಗಳಿಗೆ ತಕ್ಕಂತೆ ಅವಶ್ಯಕವಿರುವ ಕಾಮಗಾರಿಗಳನ್ನು ಮೂರನೇ ಹಂತದಲ್ಲಿ ನಿರ್ಮಿಸಲು ಟೆಂಡರ್ ಕರೆಯಲು ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ಬಿಡುಗಡೆ ಬಗ್ಗೆ. | ದಿನಾಂಕ:16-07-2009ರಂದು ನಡೆದ ಆರ್ಥಿಕ ಸಮಿತಿ ಸಭೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಭಾರತೀಯ ವೈದ್ಯಕೀಯ ಪರಿಷತ್ತಿನ ಪರಿವೀಕ್ಷಕರು ಪರಿವೀಕ್ಷಣೆಯಲ್ಲಿ ಸೂಚಿಸಿರುವ ಕಾಮಗಾರಿಗಳು ಹಾಗೂ ಇತರೆ ಅಗತ್ಯ ಕಾಮಗಾರಿಗಳು ಅಂದರೆ Construction of Nursing Quarters/ Residential Quarters/ Auditorium/ Indoor Sports / Land Scaping/ Street Light / All round Compound/ Fire Exhausts/ Fire Detectors and Fire Protectors / Rain Harvesting /MS / CAO/ FA quarters/ CEO, Zilla Panchayat, ಹಾಸನ ಇವರ ನಿವಾಸವನ್ನು ಸಂಸ್ಥೆಯ ನಿರ್ದೇಶಕರಿಗೆ ಬಿಟ್ಟುಕೊಡಬೇಕಾಗಿರುವುದರಿಂದ CEO, Zilla Panchayat, ಹಾಸನರವರಿಗೆ ವಸತಿಗೃಹ ನಿರ್ಮಿಸಿಕೊಡುವ ಕಾಮಗಾರಿ ಹಾಗೂ ಇತರೆ ಕಾಮಗಾರಿಗಳ ನಿರ್ಮಾಣವನ್ನು ಮೂರನೇ ಹಂತದಲ್ಲಿ ಕೈಗೊಳ್ಳಲು ಸುಮಾರು ರೂ.6200.00ಲಕ್ಷಗಳ ಅನುದಾನದ ಅವಶ್ಯಕತೆ ಇರುವುದರ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಸಲ್ಲಿಸಿದ್ದ ನಕ್ಷೆ ಮತ್ತು ಅಂದಾಜು ಪಟ್ಟಿಯ ಸಂಕ್ಷಿಪ್ತ ವರದಿಯನ್ನು ದಿನಾಂಕ: 16-07-2009ರಂದು ನಡೆದ ಆರ್ಥಿಕ ಸಮಿತಿ ಸಭೆಯಲ್ಲಿ ಕಾಮಗಾರಿಯ ಅಂದಾಜು ವೆಚ್ಚವನ್ನು ರೂ.3500.00ಲಕ್ಷ ಅರ್ಧಮೊತ್ತಕ್ಕೆ ಸೀಮಿತಗೊಳಿಸಿ ಕಾಮಗಾರಿ ಕೈಗೊಳ್ಳುವ ಬಗ್ಗೆ ಆಡಳಿತ ಮಂಡಳಿಗೆ ಶಿಫಾರಸ್ಸು ಮಾಡಿರುವ ಬಗ್ಗೆ ಚರ್ಚಿಸಲಾಯಿತು. ಮಾನ್ಯ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ, ಹಾಸನರವರು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಕಟ್ಟಡ ಕಾಮಗಾರಿಗಳು ಮತ್ತು ಮುಂದಿನ ದಿನಗಳ ಪರಿವರ್ತಿತ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.6200.00ಲಕ್ಷಗಳ ಅನುದಾನ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ಮಂಡಿಸಿದರು. ವಿಷಯವನ್ನು ಕೂಲಂಕೂಷವಾಗಿ ಚರ್ಚಿಸಿ ಪ್ರಸ್ತುತ ರೂ.3500.00ಲಕ್ಷಗಳ ವೆಚ್ಚದಲ್ಲಿ ಮೂರನೇ ಹಂತದ ಕಾಮಗಾರಿಯನ್ನು ಕೈಗೊಂಡು ನಾಲ್ಕನೇ ಹಂತದಲ್ಲಿ ಉಳಿದ ಕಾಮಗಾರಿಗಳನ್ನು ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು. ಆದರೆ ನಕ್ಷೆಗಳನ್ನು ಸಿದ್ದಪಡಿಸುವಾಗ ಮುಂದಿನ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಅಂದರೆ ಕಟ್ಟಡಗಳನ್ನು ವಿಸ್ತರಿಸುವುದು, ಲಿಫ್ಟ್ ಅಳವಡಿಸುವುದು ಹಾಗೂ ಇತರೆ ಸೌಲಭ್ಯಗಳನ್ನು ಅಳವಡಿಸಲು ಅನುಕೂಲವಾಗುವಂತೆ ನಕ್ಷೆಗಳನ್ನು ತಯಾರಿಸಲು ಇಲಾಖಾಧಿಕಾರಿಗಳಿಗೆ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ಸೂಚಿಸಲಾಯಿತು. ರೂ3500.00ಲಕ್ಷಗಳ ಮೂರನೇ ಹಂತದ ಕಟ್ಟಡದ ಕಾಮಗಾರಿಯನ್ನು ಅಂಗೀಕರಿಸಲಾಯಿತು. ಆಡಳಿತಾತ್ಮಕ ಅನುಮೋದನೆ ಮತ್ತು ಅಗತ್ಯ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ : ಮುಖ್ಯ ಅಭಿಯಂತರರು(ಸಿ&ಬಿ), ಬೆಂಗಳೂರು, ಕಾರ್ಯಪಾಲಕ ಅಭಿಯಂತರರು(PWD), ಹಾಸನ, ನಿರ್ದೇಶಕರು, ಹಿಮ್ಸ್, ಹಾಸನ.** |
| 6 | ನೂತನ ಹೈಟೆಕ್ ಆಸ್ಪತ್ರೆಯ ಪ್ರಗತಿ ಪರಿಶೀಲನೆ ಹಾಗೂ ಅಗತ್ಯವಿರುವ ಪೀಠೋಪಕರಣಗಳಿಗೆ ರೂ.500.00 ಲಕ್ಷ ಅನುದಾನ ಬಿಡುಗಡೆ ಬಗ್ಗೆ. | ಅ) ನೂತನವಾಗಿ ಪ್ರಾರಂಭವಾಗುತ್ತಿರುವ 750 ಹಾಸಿಗೆಗಳ ಹೈಟೆಕ್ ಆಸ್ಪತ್ರೆಯು ಮೊದಲನೇ ಹಂತದಲ್ಲಿ 400 ಹಾಸಿಗೆಗಳ ಸಾಮರ್ಥ್ಯಕ್ಕೆ ಸೀಮಿತಗೊಳಿಸಲಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿದ್ದು, ಡಿಸೆಂಬರ್ 2009ರ ಮಾಹೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹಸ್ತಾಂತರಿಸುವುದಾಗಿ ಕಾರ್ಯಪಾಲಕ ಅಭಿಯಂತರರು, KHSDP ರವರು ಸಭೆಗೆ ವಿವರಿಸಿದರು. ಈ ಕಟ್ಟಡದಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಉಪನ್ಯಾಸಕ ಕೊಠಡಿಗಳು ಮತ್ತು ಪರೀಕ್ಷಾ ಕೊಠಡಿಯನ್ನು ನಿರ್ಮಿಸಿಕೊಡುವಂತೆ ಸಂಸ್ಥೆಯ ನಿರ್ದೇಶಕರು ಕೋರಿರುತ್ತಾರೆ. ಸದರಿ ಕಾಮಗಾರಿಗೆ ಅಂದಾಜು ರೂ.240.00ಲಕ್ಷ ಅನುದಾನ ಅವಶ್ಯಕತೆ ಇದ್ದು KHSDP ಇಲಾಖೆಯಲ್ಲಿ ಅನುದಾನದ ಕೊರತೆ ಇರುವುದರಿಂದ ಈ ವೆಚ್ಚವನ್ನು ಭರಿಸಲು ಸಾಧ್ಯವಿರುವುದಿಲ್ಲವೆಂದು ಇಲಾಖಾಧಿಕಾರಿಗಳು ಸಭೆಗೆ ವಿವರಿಸಿದರು. ಆದರೆ ಈ ಉಪನ್ಯಾಸಕ ಕೊಠಡಿಗಳು ಮತ್ತು ಪರೀಕ್ಷಾ ಕೊಠಡಿಗಳು ಅತ್ಯವಶ್ಯಕವಾಗಿರುವುದರಿಂದ ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ರೂ.240.00ಲಕ್ಷಗಳನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಅನುದಾನದಲ್ಲಿ ಭರಿಸುವುದೆಂದು ತೀರ್ಮಾನಕೈಗೊಳ್ಳಲಾಯಿತು.ಆಡಳಿತಾತ್ಮಕ ಅನುಮೋದನೆಗೆ ಸೂಕ್ತವಾದ ಮಾಹಿತಿಗಳು ನಕ್ಷೆ ಅಂದಾಜು ವೆಚ್ಚವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ : ಕಾರ್ಯಪಾಲಕ ಅಭಿಯಂತರರು(KHSDRP), ಬೆಂಗಳೂರು,**<br>**ನಿರ್ದೇಶಕರು, ಹಿಮ್ಸ್, ಹಾಸನ.**<br>ಆ)ನೂತನ ಆಸ್ಪತ್ರೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳು ಪೀಠೋಪಕರಣಗಳನ್ನು ಹಾಗೂ ಇತರೆ ಸಾಮಗ್ರಿಗಳನ್ನು ಅಳವಡಿಸಿ ಸುಸಜ್ಜಿತಗೊಳಿಸಲು ಅನುಕೂಲವಾಗುವಂತೆ ಸಂಸ್ಥೆಯ ವತಿಯಿಂದ |

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ಡಾ.ಬಿ.ಸಿ.ರವಿಕುಮಾರ್, ಪ್ರಾಧ್ಯಾಪಕರು, ಚರ್ಮರೋಗ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನರವರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಿ ಸಮಿತಿಯವರು ನೀಡಿರುವ ವರದಿಯನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ವರದಿಯಲ್ಲಿ ನಮೂದಿಸಿರುವ ಪೀಠೋಪಕರಣಗಳ ವಿವರಗಳು, Specification ಹಾಗೂ ಇತರೆ ಮಾಹಿತಿಗಳು ಪರಿಪೂರ್ಣವಾಗಿರುವುದರಿಂದ ಇದನ್ನು ಒಪ್ಪಿ ಇವುಗಳ ಅವಳವಡಿಕೆಗೆ ಅಗತ್ಯವಿರುವ ಸುಮಾರು ರೂ.500.00 ಲಕ್ಷಗಳ ಅನುದಾನದ ಬಿಡುಗಡೆಗೆ ಆರ್ಥಿಕ ಸಮಿತಿ ಸಭೆಯಲ್ಲಿ ಒಪ್ಪಿರುವುದನ್ನು ಅನುಮೋದಿಸಿ ನಿಯಮಾನುಸಾರ ಸಾರ್ವಜನಿಕ ಪಾರದರ್ಶಕ ನಿಯಮದಡಿ ಟೆಂಡರ್ ಕರೆದು ಖರೀದಿಸಲು ನಿರ್ದೇಶಕರಿಗೆ ಅನುಮತಿ ನೀಡಲಾಯಿತು.<br>**ಕ್ರಮ : ನಿರ್ದೇಶಕರು, ಹಿಮ್ಸ್, ಹಾಸನ.**<br>ಇ) 2009-10ನೇ ಸಾಲಿನಲ್ಲಿ ಸಂಸ್ಥೆಗೆ ಅಗತ್ಯವಿರುವ ಉಪಕರಣಗಳ ಖರೀದಿಗಾಗಿ ಸರ್ಕಾರದಿಂದ ನಿಗದಿಪಡಿಸಿರುವಂತೆ ಉಪಕರಣಗಳ ಖರೀದಿಗಾಗಿ ಆಯ-ವ್ಯಯ ಮುಂಗಡದಲ್ಲಿ ರೂ.550.00ಲಕ್ಷಗಳ ಅನುದಾನಕ್ಕೆ ಕೋರಿಕೆ ಪತ್ರ ಸಲ್ಲಿಸಿದ್ದು ನೂತನ ಆಸ್ಪತ್ರೆಯು ಪ್ರಾರಂಭವಾಗುವುದರೊಳಗೆ ಅವಶ್ಯಕವಿರುವ ಉಪಕರಣಗಳನ್ನು ಟೆಂಡರ್ ಕರೆದು ಖರೀದಿಸಲು ಆರ್ಥಿಕ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಗೆ ಮಂಡಿಸಿದರು. ಡಾ. ಬಿ.ಸಿ. ರವಿಕುಮಾರ್‌ರವರ ವರದಿಯನ್ನು ಆದರಿಸಿ ಅವಶ್ಯಕವಿರುವ ಉಪಕರಣಗಳನ್ನು ಸಾರ್ವಜನಿಕ ಪಾರದರ್ಶಕ ನಿಯಮದಡಿ ಟೆಂಡರ್ ಕರೆದು ಖರೀದಿಸಲು ನಿರ್ದೇಶಕರಿಗೆ ಅನುಮತಿ ನೀಡಲಾಯಿತು.<br>**ಕ್ರಮ : ನಿರ್ದೇಶಕರು, ಹಿಮ್ಸ್, ಹಾಸನ.** |
| 7 | ಸಂಸ್ಥೆಯಲ್ಲಿ 2 ವರ್ಷ ಬೋಧಕ ಸಿಬ್ಬಂದಿಯವರಾಗಿ ಸೇವೆ ಪೂರ್ಣಗೊಳಿಸಿರುವ ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿ ಘೋಷಣೆ ಮಾಡುವ ಬಗ್ಗೆ. | **ಅ)** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಅಗತ್ಯವಿರುವ ಬೋಧಕ ಹುದ್ದೆಗಳಿಗೆ ಪತ್ರಿಕಾ ಪ್ರಕಟಣೆ ನೀಡಿ ನೇರ ಸಂದರ್ಶನದ ಮೂಲಕ ವಿವಿಧ ವಿಭಾಗಗಳಿಗೆ ಬೋಧಕ ಸಿಬ್ಬಂದಿಯವರನ್ನು ನೇಮಕ ಮಾಡಿಕೊಂಡಿದ್ದು, ಈ ನೇಮಕಾತಿಯನ್ನು ದಿನಾಂಕ: 04-03-2008ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಆಯ್ಕೆಯಾದ ಈ ಕೆಳಕಂಡ ಬೋಧಕ ಸಿಬ್ಬಂದಿಗಳ ಎರಡು ವರ್ಷ ಸೇವಾವಧಿ ಪೂರ್ಣಗೊಂಡಿರುತ್ತದೆ. ಸದರಿ ಬೋಧಕ ಸಿಬ್ಬಂದಿಯವರು ಹುದ್ದೆಗೆ ನಿಗದಿ ಪಡಿಸಿರುವ ಇಲಾಖಾ ಪರೀಕ್ಷೆಗಳ ತೇರ್ಗಡೆ, ಹಿಂದಿನ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ಆರ್ಥಿಕ ವರ್ಷಗಳಿಗೆ ಸಂಬಂಧಿಸಿದ ಚರ-ಸ್ಥಿರ ಆಸ್ತಿಗಳ ವಿವರ, ಕನ್ನಡ ಮಾಧ್ಯಮ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವ ವಿವರ, ಇಲಾಖಾ ವಿಚಾರಣೆಯ ವಿವರ, ರಹಸ್ಯ ದಾಖಲೆಗಳನ್ನು ಪರಿಶೀಲಿಸಿ ಎಲ್ಲವೂ ತೃಪ್ತಿಕರವಾಗಿರುವುದರಿಂದ ಸಂಸ್ಥೆಯ ನಿರ್ದೇಶಕರು, ಸದರಿ ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಿಸುವಂತೆ ಸಭೆಗೆ ಮಂಡಿಸಿದರು. ಸಂಸ್ಥೆಯ ನಿರ್ದೇಶಕರು ಶಿಫಾರಸ್ಸಿನಂತೆ ಈ ಕೆಳಕಂಡ ಬೋಧಕ ಸಿಬ್ಬಂದಿಯವರ ಪರಿವೀಕ್ಷಣಾ ಅವಧಿಯನ್ನು ಘೋಷಣೆ ಮಾಡುವಂತೆ ತೀರ್ಮಾನಿಸಲಾಯಿತು. |

| ಕ್ರ. ಸಂ | ಬೋಧಕ ಸಿಬ್ಬಂದಿಯ ಹೆಸರು ಮತ್ತು ವಿಭಾಗ | ಸೇವೆಗೆ ಸೇರಿದ ದಿನಾಂಕ | ಪರೀಕ್ಷಾ ಪೂರ್ವ ಅವಧಿ ಪೂರ್ಣಗೊಂಡ ದಿನಾಂಕ |
|---|---|---|---|
| 1 | ಡಾ. ಸುರೇಶ್ ಪ್ರಭು<br>ಸಹಾಯಕ ಪ್ರಾಧ್ಯಾಪಕರು,<br>ಸಮುದಾಯ ಶಾಸ್ತ್ರ ವಿಭಾಗ | 09.03.2006 | 08.03.2008<br>(18-05-2009 ರಿಂದ ಸಹ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ) |
| 2 | ಡಾ. ರಾಜಣ್ಣ.ಬಿ.<br>ಸಹ ಪ್ರಾಧ್ಯಾಪಕರು,<br>ಶಸ್ತ್ರ ಚಿಕಿತ್ಸಾ ವಿಭಾಗ | 01.04.2006 | 01.04.2008 |
| 3 | ಡಾ. ಕೆ.ಆರ್. ನಾಗೇಶ್,<br>ಸಹ ಪ್ರಾಧ್ಯಾಪಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 04.04.2006 | 03.04.2008 |
| 4 | ಡಾ. ಎಸ್. ಪರಮೇಶ್<br>ಸಹ ಪ್ರಾಧ್ಯಾಪಕರು,<br>ಜೀವರಸಾಯನ ಶಾಸ್ತ್ರ ವಿಭಾಗ | 06.04.2006 | 05.04.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 5 | ಡಾ. ಕಾಂತಯ್ಯ<br>ಸಹ ಪ್ರಾಧ್ಯಾಪಕರು,<br>ಜೀವರಸಾಯನ ಶಾಸ್ತ್ರ ವಿಭಾಗ | 01.08.2006 | 31.07.2008 |
| | | 6 | ಡಾ ರಾಜಶೇಖರ್ ಹೆಚ್.ಕೆ.<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯ ಶಾಸ್ತ್ರ ವಿಭಾಗ | 01.05.2006 | 30.04.2008<br>(18-05-2009 ರಿಂದ ಸಹ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ) |
| | | 7 | ಡಾ. ಶರತ್ ಕುಮಾರ್ ಶೆಟ್ಟಿ<br>ಸಹಾಯಕ ಪ್ರಾಧ್ಯಾಪಕರು,<br>ಮಿಣಿ ಜೀವ ಶಾಸ್ತ್ರ ವಿಭಾಗ | 02.05.2006 | 01.05.2008 |
| | | 8 | ಡಾ. ಪ್ರಸನ್ನ .ಎನ್<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯ ಶಾಸ್ತ್ರ ವಿಭಾಗ | 06.05.2006 | 05.05.2008 |
| | | 9 | ಡಾ. ಲೋಕೇಶ್ ಎ.ಜೆ.<br>ಸಹಾಯಕ ಪ್ರಾಧ್ಯಾಪಕರು,<br>ವೈದ್ಯ ಶಾಸ್ತ್ರ ವಿಭಾಗ | 01.06.2006 | 31.05.2008 |
| | | 10 | ಡಾ. ಮನುಪ್ರಕಾಶ್<br>ಸಹಾಯಕ ಪ್ರಾಧ್ಯಾಪಕರು,<br>ಮಕ್ಕಳ ವಿಭಾಗ | 01.06.2006 | 31.05.2008 |
| | | 11 | ಡಾ. ರಾಘವೇಂದ್ರ ಪ್ರಸಾದ್ ಕೆ.ಯು.<br>ಸಹಾಯಕ ಪ್ರಾಧ್ಯಾಪಕರು,<br>ಕಿವಿ, ಮೂಗು ಮತ್ತು ಗಂಟಲು ವಿಭಾಗ | 01.06.2006 | 31.05.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 12 | ಶ್ರೀ. ಶ್ಯಾಮರಾಜ ಉಡುಪ.ಟಿ.<br>ಸಹಾಯಕ ಪ್ರಾಧ್ಯಾಪಕರು,<br>ಜೀವರಾಸಯನ ಶಾಸ್ತ್ರ ವಿಭಾಗ. | 01.06.2006 | 31.05.2008 |
| | | 13 | ಡಾ. ಯತೀಶ್ ಟಿ.ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಶರೀರ ಕ್ರಿಯಾ ಶಾಸ್ತ್ರ ವಿಭಾಗ | 12.06.2006 | 11.06.2009 |
| | | 14 | ಡಾ. ಬೇಲೂರೇಗೌಡ.ಪಿ. ಆರ್.<br>ಹಿರಿಯ ಸ್ಥಾನಿಯ ವೈದ್ಯರು,<br>ಕಿವಿ ಮೂಗು ಮತ್ತು ಗಂಟಲು ವಿಭಾಗ. | 30.06.2006 | 29.06.2008 |
| | | 15 | ಡಾ. ಸತೀಶ ಬಾಬು<br>ಹಿರಿಯ ಸ್ಥಾನಿಯ ವೈದ್ಯರು<br>ಕಿವಿ ಮೂಗು ಮತ್ತು ಗಂಟಲು ವಿಭಾಗ, | 03.07.2006 | 02.07.2008 |
| | | 16 | ಡಾ. ವೆಂಕಟೇಶ್ ಡಿ.ಟಿ.<br>ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ಮಿಣಿ ಜೀವ ಶಾಸ್ತ್ರ ವಿಭಾಗ | 05.07.2006 | 04.07.2008<br>(01-07-2007 ರಿಂದ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ) |
| | | 17 | ಡಾ. ರಾಮನಾಥ್ .ಜಿ.ಪಿ<br>ಹಿರಿಯ ಸ್ಥಾನಿಯ ವೈದ್ಯರು,<br>ಅರವಳಿಕೆ ವಿಭಾಗ. | 14.07.2006 | 13.07.2008 |
| | | 18 | ಡಾ. ರವಿಕುಮಾರ್ ಬಿ.ಸಿ<br>ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,<br>ಚರ್ಮರೋಗ ಚಿಕಿತ್ಸಾ ವಿಭಾಗ | 01.08.2006 | 31.07.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 19 | ಡಾ. ಲಕ್ಷ್ಮೀಶ .ಟಿ.<br>ಸಹಾಯಕ ಪ್ರಾಧ್ಯಾಪಕರು<br>ಕೀಲು ಮತ್ತು ಮೂಳೆ ವಿಭಾಗ | 01.08.2006 | 31.07.2008 |
| | | 20 | ಡಾ. ಎಸ್. ಆರ್. ಪದ್ಮ<br>ಉಪನ್ಯಾಸಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 18.08.2006 | 17.08.2008 |
| | | 21 | ಡಾ. ಮನೋಹರ್ ಎಸ್.ಆರ್.<br>ಹಿರಿಯ ಸ್ಥಾನಿಯ ವೈದ್ಯರು<br>ಕಿವಿ ಮೂಗು ಮತ್ತು ಗಂಟಲು ವಿಭಾಗ | 28.08.2006 | 27.08.2008 |
| | | 22 | ಡಾ. ವಿಠಲ್ ಬಿ.ಜಿ.<br>ಸಹಾಯಕ ಪ್ರಾಧ್ಯಾಪಕರು,<br>ಜೀವ ರಸಾಯನ ಶಾಸ್ತ್ರ ವಿಭಾಗ | 04.09.2006 | 03.09.2008 |
| | | 23 | ಡಾ. ಸೋಮಶೇಖರ್ ಜಿ.ಕೆ.<br>ಉಪನ್ಯಾಸಕರು<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 05.09.2006 | 04.09.2008 |
| | | 24 | ಡಾ. ಸುರೇಶ್ ಎಂ.ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಚರ್ಮರೋಗ ಚಿಕಿತ್ಸಾ ವಿಭಾಗ | 04.10.2006 | 03.10.2008 |
| | | 25 | ಡಾ. ಮಂಜುನಾಥ್.ಎಸ್.<br>ಹಿರಿಯ ಸ್ಥಾನಿಯ ವೈದ್ಯರು<br>ಪ್ರಸುತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ | 26.06.2007 | 25.06.2009 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 26 | ಡಾ. ಶಶಾಂಕ್ ಆರ್.<br>ಹಿರಿಯ ಸ್ಥಾನಿಯ ವೈದ್ಯರು,<br>ಶಸ್ತ್ರ ಚಿಕಿತ್ಸಾ ವಿಭಾಗ | 30.10.2006 | 29.10.2008<br>05.07-2007ರಿಂದ<br>ಸಹಾಯಕ ಪ್ರಾಧ್ಯಾಪಕರಾಗಿ<br>ಕೆಲಸ ನಿರ್ವಹಿಸುತ್ತಿದ್ದಾರೆ. |
| | | 27 | ಡಾ. ಹನುಮಂತಪ್ಪ .ವಿ.ಐರಣಿ<br>ಸಹಾಯಕ ಪ್ರಾಧ್ಯಾಪಕರು,<br>ಅರವಳಿಕೆ ವಿಭಾಗ | 02.11.2006 | 01.11.2008 |
| | | 28 | ಡಾ. ಬಸವರಾಜ .ಜಿ.ಎನ್.<br>ಹಿರಿಯ ಸ್ಥಾನಿಯ ವೈದ್ಯರು,<br>ಶಸ್ತ್ರ ಚಿಕಿತ್ಸಾ ವಿಭಾಗ | 02.11.2006 | 01.11.2008<br>08.08.2007ರಿಂದ<br>ಸಹಾಯಕ ಪ್ರಾಧ್ಯಾಪಕರಾಗಿ<br>ಕೆಲಸ ನಿರ್ವಹಿಸುತ್ತಿದ್ದಾರೆ. |
| | | 29 | ಡಾ. ಪ್ರೇಮಲತಾ .ಹೆಚ್.ಎಲ್.<br>ಸಹಾಯಕ ಪ್ರಾಧ್ಯಾಪಕರು,<br>ಪ್ರಸ್ತುತಿ & ಸ್ತ್ರೀರೋಗ ಚಿಕಿತ್ಸಾ ವಿಭಾಗ | 15.06.2006 | 14.06.2008 |
| | | 30 | ಡಾ. ಶ್ರೀಧರ್ ಎಸ್.ಕೆ.<br>ಸಹಾಯಕ ಪ್ರಾಧ್ಯಾಪಕರು,<br>ಪ್ರಸ್ತುತಿ & ಸ್ತ್ರೀ ರೋಗಚಿಕಿತ್ಸಾ ವಿಭಾಗ | 01.08.2006 | 31.07.2008 |
| | | 31 | ಡಾ. ಪುರುಷೋತ್ತಮ ಆರ್.<br>ಸಹಾಯಕ ಪ್ರಾಧ್ಯಾಪಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 01.01.2007 | 31.12.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 32 | ಡಾ. ಎಂ. ಲಕ್ಷ್ಮೀನಾರಾಯಣ<br>ಉಪನ್ಯಾಸಕರು,<br>ಸಮುದಾಯ ಶಾಸ್ತ್ರ ವಿಭಾಗ | 18.01.2007 | 17.01.2009 |
| | | 33 | ಡಾ. ಗಾಯತ್ರಿ .ಎಲ್<br>ಸಹಾಯಕ ಪ್ರಾಧ್ಯಾಪಕರು,<br>ಮಿಣಿ ಜೀವ ಶಾಸ್ತ್ರ ವಿಭಾಗ | 22.01.2007 | 21.01.2009 |
| | | 34 | ಡಾ. ವಿನಯ್ .ಕೆ.ಎನ್.<br>ಹಿರಿಯ ಸ್ಥಾನಿಯ ವೈದ್ಯರು,<br>ಚರ್ಮರೋಗ ಚಿಕಿತ್ಸಾ ವಿಭಾಗ | 01.02.2007 | 31.01.2009 |
| | | 35 | ಡಾ. ವಿನಯ್ ಕುಮಾರ್. ಎಂ.ವಿ.<br>ಉಪನ್ಯಾಸಕರು,<br>ಕಿವಿ,ಮೂಗು & ಗಂಟಲು ವಿಭಾಗ | 01.03.2007 | 29.02.2009 |
| | | 36 | ಶ್ರೀ ವಿಜಯ್ ಕುಮಾರ್. ಆರ್.<br>ಎಂ.ಎಸ್. ಡಬ್ಲ್ಯೂ<br>ಸಮುದಾಯ ವೈದ್ಯ ಶಾಸ್ತ್ರ ವಿಭಾಗ | 04.04.2007 | 03.04.2009 |
| | | 37 | ಶ್ರೀಮತಿ ನಿಚಿತ ಕುಮಾರಿ<br>ಎಂ.ಎಸ್. ಡಬ್ಲ್ಯೂ<br>ಸಮುದಾಯ ವೈದ್ಯ ಶಾಸ್ತ್ರ ವಿಭಾಗ | 05.04.2007 | 04.04.2009 |
| | | 38 | ಡಾ. ವಿಶ್ವನಾಥ್ .ಡಿ.<br>ಸಹಾಯಕ ಪ್ರಾಧ್ಯಾಪಕರು,<br>ನ್ಯಾಯ ವೈದ್ಯ ಶಾಸ್ತ್ರ ವಿಭಾಗ | 25.06.2007 | 24.06.2009 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|

| | | | |
|---|---|---|---|
| 39 | ಡಾ. ನಳಿನಿ.ಜಿ.ಕೆ<br>ಸಹ ಪ್ರಾಧ್ಯಾಪಕರು,<br>ಔಷಧ ಶಾಸ್ತ್ರ ವಿಭಾಗ | 28.05.2007 | 27.05.2009 |
| 40 | ಡಾ. ಅರುಣ ಬಿ.ಜಿ.<br>ಹಿರಿಯ ಸ್ಥಾನಿಯ ವೈದ್ಯರು,<br>ಅರವಳಿಕೆ ವಿಭಾಗ. | 25.05.2007 | 24.05.2009<br>01.02.2008ರಿಂದ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. |
| 41 | ಡಾ. ಸುದನ್ವ ಎಸ್.<br>ಸಹಾಯಕ ಪ್ರಾಧ್ಯಾಪಕರು,<br>ಶರೀರ ಕ್ರಿಯಾ ಶಾಸ್ತ್ರ ವಿಭಾಗ | 16.06.2007 | 15.06.2009 |
| 42 | ಡಾ. ದೀಪಕ್ .ಪಿ.<br>ಸಹಾಯಕ ಪ್ರಾಧ್ಯಾಪಕರು,<br>ಔಷಧ ಶಾಸ್ತ್ರ ವಿಭಾಗ. | 16.06.2007 | 15.06.2009 |

**ಆ)** ಕ್ರಮ ಸಂಖ್ಯೆ: 36ರ ಶ್ರೀ ವಿಜಯ್ ಕುಮಾರ್ ಆರ್,ಎಂ.ಎಸ್. ಡಬ್ಲ್ಯೂ,ಸಮುದಾಯ ವೈದ್ಯ ಶಾಸ್ತ್ರ ವಿಭಾಗ, ಮತ್ತು ಕ್ರಮ ಸಂಖ್ಯೆ: 37ರ ಶ್ರೀಮತಿ ನಿಚಿತ ಕುಮಾರಿ, ಎಂ.ಎಸ್. ಡಬ್ಲ್ಯೂ, ಸಮುದಾಯ ವೈದ್ಯಶಾಸ್ತ್ರ ವಿಭಾಗ ಇವರುಗಳ ಹುದ್ದೆ ಬೋಧಕೇತರ ಹುದ್ದೆಯಾಗಿರುವುದರಿಂದ ಮತ್ತು ವೇತನ ವ್ಯತ್ಯಾಸವಿರುವುದರಿಂದ ಇವರ ಪರಿವೀಕ್ಷಣಾ ಅವಧಿಯನ್ನು ಮುಂದೂಡಲು ಮತ್ತು ಸಂಸ್ಥೆಯ ನಿರ್ದೇಶಕರ ವ್ಯಾಪ್ತಿಯಲ್ಲಿಯೇ ತೀರ್ಮಾನ ತೆಗೆದುಕೊಳ್ಳುವಂತೆ ಅನುಮತಿ ನೀಡಲಾಯಿತು.

**ಇ)** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಈ ಕೆಳಕಂಡ ಬೋಧಕ ಸಿಬ್ಬಂದಿಯವರು ಎರಡು ವರ್ಷ ಸೇವೆಯನ್ನು ಪೂರ್ಣಗೊಳಿಸಿದ್ದು, ಸದರಿ ವೈದ್ಯರುಗಳು ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಂತರ ಪರಿಶೀಲಿಸುವಂತೆ ತೀರ್ಮಾನಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | (see table below) |

| ಕ್ರ.ಸಂ | ಬೋಧಕ ಸಿಬ್ಬಂದಿಯ ಹೆಸರು ಮತ್ತು ವಿಭಾಗ | ಸೇವೆಗೆ ಸೇರಿದ ದಿನಾಂಕ | ಪರೀಕ್ಷಾ ಪೂರ್ವ ಅವಧಿ ಪೂರ್ಣಗೊಂಡ ದಿನಾಂಕ |
|---|---|---|---|
| 1 | ಡಾ. ರಾಘವೇಂದ್ರ ರಾವ್<br>ಸಹಾಯಕ ಪ್ರಾಧ್ಯಾಪಕರು,<br>ಮಕ್ಕಳ ಚಿಕಿತ್ಸಾ ವಿಭಾಗ. | 05.06.2006 | 04.06.2008 |
| 2 | ಡಾ. ಕಿರಣ್ ಎಸ್.ಸಿ.<br>ಹಿರಿಯ ಸ್ಥಾನಿಯ ವೈದ್ಯರು<br>ಕೀಲು ಮತ್ತು ಮೂಳೆ ವಿಭಾಗ | 19.09.2006 | 18.09.2008 |
| 3 | ಡಾ. ಪೂರ್ಣಚಂದ್ರ ಆರ್.<br>ಹಿರಿಯ ಸ್ಥಾನಿಯ ವೈದ್ಯರು<br>ಕೀಲು ಮತ್ತು ಮೂಳೆ ವಿಭಾಗ | 14.07.2006 | 13.07.2008 |
| 4 | ಡಾ. ಅನುಪ್ ಎಂ.<br>ಹಿರಿಯ ಸ್ಥಾನಿಯ ವೈದ್ಯರು<br>ವೈದ್ಯ ಶಾಸ್ತ್ರ ವಿಭಾಗ | 13.10.2006 | 12.10.2008 |
| 5 | ಡಾ. ಚೆನ್ನವೀರಪ್ಪ. ಪಿ.ಕೆ<br>ಸಹಾಯಕ ಪ್ರಾಧ್ಯಾಪಕರು,<br>ಶ್ವಾಸಕೋಶ ಚಿಕಿತ್ಸಾ ವಿಭಾಗ | 08.05.2007 | 07.05.2009 |
| 6 | ಡಾ.ರಾಜೇಗೌಡ ಎ.ಎಸ್.<br>ಹಿರಿಯ ಸ್ಥಾನಿಯ ವೈದ್ಯರು<br>ಶಸ್ತ್ರ ಚಿಕಿತ್ಸಾ ವಿಭಾಗ | 25.05.2007 | 24.05.2009 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 7 | ಡಾ. ತಿಪ್ಪೇರುದ್ರಯ್ಯ .ಸಿ<br>ಪ್ರಾಧ್ಯಾಪಕರು,<br>ಶಸ್ತ್ರ ಚಿಕಿತ್ಸಾ ವಿಭಾಗ | 10.03.2007 | 09.03.2009 |
| | | 8 | ಡಾ. ಪೂರ್ಣಿಮ .ಹೆಚ್. ಎನ್.<br>ಹಿರಿಯ ಸ್ಥಾನಿಯ ವೈದ್ಯರು<br>ಪ್ರಸೂತಿ & ಸ್ತ್ರೀರೋಗ ಚಿಕಿತ್ಸಾ ವಿಭಾಗ | 26.10.2006 | 25.10.2008 |
| | | 9 | ಡಾ. ಮನು ಪ್ರಸಾದ್ ಪಿ.ಆರ್.<br>ಹಿರಿಯ ಸ್ಥಾನಿಯ ವೈದ್ಯರು<br>ಅರವಳಿಕೆ ವಿಭಾಗ | 26.10.2006 | 25.10.2008 |
| | | 10 | ಡಾ. ಶಿವರಾಜ್ .ಟಿ.<br>ಹಿರಿಯ ಸ್ಥಾನಿಯ ವೈದ್ಯರು<br>ಅರವಳಿಕೆ ವಿಭಾಗ | 16.11.2006 | 15.11.2008 |
| | | 11 | ಡಾ. ಸತ್ಯ ನಾರಾಯಣ ಪ್ರಸಾದ್<br>ಪ್ರಾಧ್ಯಾಪಕರು,<br>ಅರವಳಿಕೆ ವಿಭಾಗ | 09.02.2007 | 15.11.2009 |
| 8 | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಸಂಸ್ಥೆಗೆ ಅಗತ್ಯವಿದ್ದಬೋಧಕ ಸಿಬ್ಬಂದಿಯನ್ನು ನೇರ ಸಂದರ್ಶನದ ಮೂಲಕ ನೇಮಕ ಮಾಡಿಕೊಂಡಿರುವ ಬಗ್ಗೆ. | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಸಂಸ್ಥೆಗೆ ಅಗತ್ಯವಿದ್ದ ಈ ಕೆಳಕಂಡ ಬೋಧಕ ಸಿಬ್ಬಂದಿಯವರನ್ನು ಪತ್ರಿಕಾ ಜಾಹೀರಾತು ನೀಡಿ ದಿನಾಂಕ:05-11-2008 ಮತ್ತು 05-01-2009ರಂದು ನಡೆದ ನೇರ ಸಂದರ್ಶನದ ಮೂಲಕ ಮತ್ತು ನೇರ ನೇಮಕಾತಿಯ ಮೂಲಕ ವಿವಿಧ ದಿನಾಂಕಗಳಲ್ಲಿ ನೇಮಕ ಮಾಡಿಕೊಂಡಿರುವುದನ್ನು ಒಪ್ಪಿ ಗೌರವಾನ್ವಿತ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದಿಸಲಾಯಿತು. | | | |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | |

| ಕ್ರ.ಸಂ. | ಬೋಧಕ ಸಿಬ್ಬಂದಿಯವರ ಹೆಸರು ಮತ್ತು ಹುದ್ದೆ | ಕೆಲಸಕ್ಕೆ ಸೇರಿದ ದಿನಾಂಕ |
|---|---|---|
| | **ಅಂಗರಚನಾ ಶಾಸ್ತ್ರ ವಿಭಾಗ** | |
| 1 | ಡಾ. ಅರುಣ್ ಕುಮಾರ್ ಎಸ್. ಬಿಲೋಡಿ<br>ಪ್ರಾಧ್ಯಾಪಕರು | 15.06.2009 |
| 2 | ಡಾ. ಮಂಜುನಾಥ್ ಸಿ.ಎಸ್.<br>ಸಹಾಯಕ ಪ್ರಾಧ್ಯಾಪಕರು | 19.06.2009 |
| 3 | ಡಾ. ಗೋಪಾಲ ಕೃಷ್ಣ,<br>ಬೋಧಕರು | 14.11.2008 |
| 4 | ಡಾ. ಖಾಜಾ ಮಯೂದ್ದೀನ್ ,<br>ಬೋಧಕರು | 19.05.2009 |
| | **ಶರೀರ ಕ್ರಿಯಾ ಶಾಸ್ತ್ರ ವಿಭಾಗ** | |
| 5 | ಡಾ. ಧನಂಜಯ<br>ಸಹ ಪ್ರಾಧ್ಯಾಪಕರು | 16.02.2009 |
| 6 | ಡಾ. ಮಮತ .ಸಿ.ಎನ್.<br>ಸಹಾಯಕ ಪ್ರಾಧ್ಯಾಪಕರು | 28.05.2009 |
| | **ಜೀವ ರಸಾಯನ ಶಾಸ್ತ್ರ ವಿಭಾಗ** | |
| 7 | ಡಾ. ರಶ್ಮಿ ಹೆಚ್.ಡಿ.<br>ಬೋಧಕರು | 20.02.2009 |
| 8 | ಡಾ. ರಾಜ್ ಕುಮಾರ್,<br>ಬೋಧಕರು | 01.12.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | |

| | | |
|---|---|---|
| | **ರೋಗ ಲಕ್ಷಣ ಶಾಸ್ತ್ರ ವಿಭಾಗ** | |
| 9 | ಡಾ. ವಿಜಯ .ಪಿ.ಎಮ್.<br>ಸಹಾಯಕ ಪ್ರಾಧ್ಯಾಪಕರು | 02.02.2009 |
| | ಮಿಣಿ ಜೀವ ಶಾಸ್ತ್ರ ವಿಭಾಗ | |
| 10 | ಡಾ. ಶ್ರೀಧರ್ ಹೆಚ್.ಜಿ.<br>ಸಹ ಪ್ರಾಧ್ಯಾಪಕರು | 30.12.2008 |
| 11 | ಡಾ. ಶೃತಿ ಮೂರ್ತಿ .ಕೆ.<br>ಬೋಧಕರು | 26.02.2009 |
| | **ಔಷಧ ಶಾಸ್ತ್ರ ವಿಭಾಗ** | |
| 12 | ಡಾ. ಸಹನಾ.ಜಿ.ಎಸ್.<br>ಸಹಾಯಕ ಪ್ರಾಧ್ಯಾಪಕರು, ಫಾರ್ಮಕೆಮಿಸ್ಟ್ | 19.06.2009 |
| 13 | ಡಾ. ಸಹನ.ಕೆ. ಹೆಬ್ಬಾರ್<br>ಬೋಧಕರು | 04.06.2008 |
| | **ಸಮುದಾಯ ಶಾಸ್ತ್ರ ವಿಭಾಗ** | |
| 14 | ಡಾ. ಸುಂದರ್ .ಎಮ್.<br>ಪ್ರಾಧ್ಯಾಪಕರು | 09.06.2008 |
| 15 | ಡಾ. ಪ್ರವೀಣ್ .ಜಿ.<br>ಸಹಾಯಕ ಪ್ರಾಧ್ಯಾಪಕರು | 19.06.2009 |
| 16 | ಡಾ. ತೇಜೇಶ್ವರಿ .ಹೆಚ್.ಎಲ್.<br>ಸಹಾಯಕ ಪ್ರಾಧ್ಯಾಪಕರು | 19.06.2009 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | |

| | | |
|---|---|---|
| 17 | ಡಾ. ನೀರಜ<br>ಬೋಧಕರು | 04.04.2008 |
| 18 | ಡಾ. ಸುಪ್ರಿಯ .ಡಿ. ಸಿಲ್ವ<br>ಬೋಧಕರು | 28.05.2008 |
| 19 | ಡಾ. ಲಕ್ಷ್ಮಿ ಪ್ರಫುಲ್ಲ<br>ಬೋಧಕರು | 24.04.2009 |
| | **ವೈದ್ಯಶಾಸ್ತ್ರ ವಿಭಾಗ** | |
| 20 | ಡಾ. ದೀಪಾ<br>ಕಿರಿಯ ಸ್ಥಾನಿಯ ವೈದ್ಯರು | 30.03.2009 |
| 21 | ಡಾ. ರಾಘವೇಂದ್ರ ಎಸ್.ಎಮ್.<br>ಕಿರಿಯ ಸ್ಥಾನಿಯ ವೈದ್ಯರು | 15.06.2009 |
| 22 | ಡಾ. ಅರೀಫುದ್ದೀನ್<br>ಕಿರಿಯ ಸ್ಥಾನಿಯ ವೈದ್ಯರು | 30.09.2008 |
| 23 | ಡಾ. ಅನುಮೋಲ್<br>ಕಿರಿಯ ಸ್ಥಾನಿಯ ವೈದ್ಯರು | 15.06.2009 |
| | **ಚರ್ಮರೋಗ ಚಿಕಿತ್ಸಾ ವಿಭಾಗ** | |
| 24 | ಡಾ.ಗೀತಾ ಶ್ರೀ<br>ಕಿರಿಯ ಸ್ಥಾನಿಯ ವೈದ್ಯರು | 12.05.2008 |
| | **ಮನೋರೋಗ ಚಿಕಿತ್ಸಾ ವಿಭಾಗ** | |
| 25 | ಡಾ. ಗುರುಪ್ರಸಾದ್<br>ಸಹಾಯಕ ಪ್ರಾಧ್ಯಾಪಕರು | 24.05.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | | |
|---|---|---|---|---|---|
| | | 26 | ಡಾ. ಭಾರತಿ<br>ಹಿರಿಯ ಸ್ಥಾನಿಯ ವೈದ್ಯರು | 02.04.2009 | |
| | | | **ಮಕ್ಕಳ ಚಿಕಿತ್ಸಾ ವಿಭಾಗ** | | |
| | | 27 | ಡಾ. ಹರೀಶ್<br>ಕಿರಿಯ ಸ್ಥಾನಿಯ ವೈದ್ಯರು | 19.05.2009 | |
| | | | **ಕೀಲು ಮತ್ತು ಮೂಳೆ ರೋಗ ಚಿಕಿತ್ಸಾ ವಿಭಾಗ** | | |
| | | 28 | ಡಾ. ಶಶಿಧರ .ವಿ.ಎಸ್.<br>ಕಿರಿಯ ಸ್ಥಾನಿಯ ವೈದ್ಯರು | 24.03.2009 | |
| | | 29 | ಡಾ. ದೇವಿಕಾ ರಾಣಿ<br>ಕಿರಿಯ ಸ್ಥಾನಿಯ ವೈದ್ಯರು | 30.03.2009 | |
| | | 30 | ಡಾ.ಲೋಕೇಶ್ .ಪಿ<br>ಕಿರಿಯ ಸ್ಥಾನಿಯ ವೈದ್ಯರು | 24.02.2009 | |
| | | | **ನೇತ್ರ ಚಿಕಿತ್ಸಾ ವಿಭಾಗ** | | |
| | | 31 | ಡಾ. ದಾದಾ ಪೀರ್<br>ಸಹಾಯಕ ಪ್ರಾಧ್ಯಾಪಕರು | 25.02.2009 | |
| | | 32 | ಡಾ. ಜ್ಯೋತಿ<br>ಕಿರಿಯ ಸ್ಥಾನಿಯ ವೈದ್ಯರು | 07.08.2008 | |
| | | 33 | ಡಾ. ಶಿವಪ್ರಸಾದ್.ಡಿ.<br>ಕಿರಿಯ ಸ್ಥಾನಿಯ ವೈದ್ಯರು | 19.03.2009 | |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | |
|---|---|---|---|---|
| | | | ಶಸ್ತ್ರ ಚಿಕಿತ್ಸಾ ವಿಭಾಗ | |
| | | 34 | ಡಾ. ಪಾಲಚಂದ್ರ<br>ಸಹ ಪ್ರಾಧ್ಯಾಪಕರು | 15.07.2009 |
| | | 35 | ಡಾ. ಶ್ರೀಧರ.ಜಿ.<br>ಹಿರಿಯ ಸ್ಥಾನಿಯ ವೈದ್ಯರು | 28.11.2008 |
| | | 36 | ಡಾ. ಪಲ್ಲವಿ.ಎ.ಎಸ್.<br>ಕಿರಿಯ ಸ್ಥಾನಿಯ ವೈದ್ಯರು | 01.10.2008 |
| | | 37 | ಡಾ. ಜ್ಯೋತಿ ಲಕ್ಷ್ಮಿ<br>ಕಿರಿಯ ಸ್ಥಾನಿಯ ವೈದ್ಯರು | 24.02.2009 |
| | | 38 | ಡಾ. ಸಂಪತ್ ಕುಮಾರ್ ವೈ.ಎಮ್.<br>ಕಿರಿಯ ಸ್ಥಾನಿಯ ವೈದ್ಯರು | 10.02.2009 |
| | | | ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ | |
| | | 39 | ಡಾ. ಮಂಗಳ ಗೌರಿ<br>ಕಿರಿಯ ಸ್ಥಾನಿಯ ವೈದ್ಯರು | 29.05.2008 |
| | | 40 | ಡಾ. ಅಭಿಲಾಷ ನಾರಾಯಣ್<br>ಕಿರಿಯ ಸ್ಥಾನಿಯ ವೈದ್ಯರು | 09.02.2009 |
| | | | ಅರವಳಿಕೆ ವಿಭಾಗ | |
| | | 41 | ಡಾ. ನಾಗೇಶ್ .ಕೆ.ಎ<br>ಸಹಾಯಕ ಪ್ರಾಧ್ಯಾಪಕರು | 07.08.2008 |
| | | 42 | ಡಾ. ಹೇಮ ಹೆಚ್.ಎ.<br>ಹಿರಿಯ ಸ್ಥಾನಿಯ ವೈದ್ಯರು | 07.05.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ | | |
|---|---|---|---|---|
| | | 43 | ಡಾ. ಶೃತಿ ಜಯರಾಂ<br>ಕಿರಿಯ ಸ್ಥಾನಿಯ ವೈದ್ಯರು | 02.06.2008 |
| 9 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ ವಿಲೀನಗೊಂಡಿರುವ ವೈದ್ಯಾಧಿಕಾರಿಗಳ ವೇತನ ಹಾಗೂ ಭತ್ಯೆ ಪಾವತಿ ಬಗ್ಗೆ. | **ಅ)** ಸರ್ಕಾರದ ಆದೇಶ ಸಂಖ್ಯೆ:ಆಕುಕ:395:ಎಂಎಂಸಿ:2007, ದಿನಾಂಕ:28-07-2009ರ ಆದೇಶದನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶ್ರೀಚಾಮರಾಜೇಂದ್ರ ಆಸ್ಪತ್ರೆ ಹಾಸನದಲ್ಲಿ ಸೇವೆ ಸಲ್ಲಿಸುತ್ತಿರುವ 10 ವೈದ್ಯಾಧಿಕಾರಿಗಳನ್ನು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿಲೀನಗೊಳಸಲಾಗಿದ್ದು, ಮಹಾಲೇಖಪಾಲಕರ ಪತ್ರಸಂಖ್ಯೆ:GE-III/MI/Genl/09-10/57-60, ದಿನಾಂಕ:27-04-2009ರ ಪತ್ರದಲ್ಲಿ 01-04-2009ರಿಂದ ಮುಂದಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆಯಿಂದಲೇ ಸದರಿ ವೈದ್ಯರುಗಳ ವೇತನವನ್ನು ಪಾವತಿಸುವಂತೆ ಬರೆದಿರುವ ಪತ್ರದ ಬಗ್ಗೆ ಚರ್ಚಿಸಲಾಯಿತು. ವಿಲೀನಗೊಂಡಿರುವ 10 ವೈದ್ಯಾಧಿಕಾರಿಗಳ ಪೈಕಿ ಡಾ.ಡಿ.ಪ್ರೇಮ್ ಕುಮಾರ್, ರವರ ಬೋಧಕ ಅನುಭವವನ್ನು ಪರಿಗಣಿಸಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರನ್ನಾಗಿಯೂ, ಡಾ. ಶ್ರೀ ರಂಗರವರ ಬೋಧಕ ಅನುಭವವನ್ನು ಪರಿಗಣಿಸಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಕೀಲು ಮತ್ತು ಮೂಳೆವಿಭಾಗದ ಸಹ ಪ್ರಾಧ್ಯಾಪಕರನ್ನಾಗಿಯೂ, ನೇಮಕಮಾಡಿ ಕೊಳ್ಳಲು ದಿನಾಂಕ:05-08-2008ರ ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಆದರೆ ಮೇಲ್ಕಂಡ ಈ ಇಬ್ಬರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಬರುವುದರಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿಲೀನಗೊಳ್ಳುವ ಬಗ್ಗೆ ಸರ್ಕಾರದಿಂದ ಆದೇಶ ಬರುವವರೆಗೆ ಯಾವುದೇ ಆರ್ಥಿಕ ಲಾಭವನ್ನು ಪಡೆದು ಕೊಳ್ಳಲು ಅರ್ಹರಿರುವುದಿಲ್ಲವೆಂದು ತೀರ್ಮಾನಿಸಲಾಗಿತ್ತು. ಆದರೆ ಇದೀಗ ಈ ಇಬ್ಬರು ವೈದ್ಯರುಗಳನ್ನು ಸಹ ಒಳಗೊಂಡಂತೆ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯ ಇತರೆ 8 ಹಿರಿಯ ವೈದ್ಯರುಗಳು ಸೇರಿ ಈ ಕೆಳಕಂಡ 10 ವೈದ್ಯಾಧಿಕಾರಿಗಳನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ, ಸರ್ಕಾರವು ವಿಲೀನಗೊಳಿಸಿರುವುದುನ್ನು ಒಪ್ಪಿ ಅಂಗೀಕರಿಸಲಾಯಿತು. | | |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | |

| ಕ್ರಮ ಸಂಖ್ಯೆ | ಬೋಧಕ ಸಿಬ್ಬಂದಿಯವರ ಹೆಸರು ಮತ್ತು ಆಕುಕ ಇಲಾಖೆಯಲ್ಲಿ ಹೊಂದಿದ್ದ ಹುದ್ದೆ | ವಿದ್ಯಾರ್ಹತೆ | ಆಕುಕ ಇಲಾಖೆಯಿಂದ ವೈದ್ಯಕೀಯ ಶಿಕ್ಷಣ ಇಲಾಖೆಗೆ ವಿಲೀನಗೊಂಡ ನಂತರ ಹೊಂದಿರುವ ಹುದ್ದೆ |
|---|---|---|---|
| 1 | ಡಾ. ಡಿ. ಪ್ರೇಮ್ ಕುಮಾರ್ ,<br>ಜಿಲ್ಲಾ ಶಸ್ತ್ರ ಚಿಕಿತ್ಸಕರು,<br>ವೈದ್ಯಕೀಯ ಅಧೀಕ್ಷಕರು | MD(GM) | ಪ್ರಾಧ್ಯಾಪಕರು<br>ವೈದ್ಯಶಾಸ್ತ್ರ ವಿಭಾಗ |
| 2 | ಡಾ. ಶ್ರೀರಂಗ<br>ಹಿರಿಯ ಸ್ಥಾನಿಯ ವೈದ್ಯರು | MS(ORTHO) | ಸಹ ಪ್ರಾಧ್ಯಾಪಕರು |
| 3 | ಡಾ. ಹೆಚ್.ಆರ್. ಕೃಷ್ಣೇಗೌಡ<br>ಹಿರಿಯ ಸ್ಥಾನಿಯ ವೈದ್ಯರು | MD(GM) | ಸಹಾಯಕ ಪ್ರಾಧ್ಯಾಪಕರು |
| 4 | ಡಾ. ಕೆ. ಶಂಕರ್<br>ಹಿರಿಯ ಸ್ಥಾನಿಯ ವೈದ್ಯರು | MS(ORTHO) | ಸಹಾಯಕ ಪ್ರಾಧ್ಯಾಪಕರು |
| 5 | ಡಾ. ವಿ. ಕೃಷ್ಣಮೂರ್ತಿ<br>ಹಿರಿಯ ಸ್ಥಾನಿಯ ವೈದ್ಯರು | MS(GS) | ಸಹಾಯಕ ಪ್ರಾಧ್ಯಾಪಕರು |
| 6 | ಡಾ. ನಿರ್ಮಲ ದೊರೆಸ್ವಾಮಿ<br>ಹಿರಿಯ ಸ್ಥಾನಿಯ ವೈದ್ಯರು | MD(DGO) | ಸಹಾಯಕ ಪ್ರಾಧ್ಯಾಪಕರು |
| 7 | ಡಾ.ಹೆಚ್.ಕುಮಾರ್ ನಾಯಕ್<br>ಹಿರಿಯ ಸ್ಥಾನಿಯ ವೈದ್ಯರು | MD(PATH) | ಸಹಾಯಕ ಪ್ರಾಧ್ಯಾಪಕರು |
| 8 | ಡಾ. ಜಿ.ಡಿ. ಈಶ್ವರ ಪ್ರಸಾದ್<br>ಹಿರಿಯ ಸ್ಥಾನಿಯ ವೈದ್ಯರು | MS(GS) | ಸಹಾಯಕ ಪ್ರಾಧ್ಯಾಪಕರು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ. ಸಂ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>9</td><td>ಡಾ. ಕೆ.ಟಿ. ಶಿವಕುಮಾರ್<br>ಹಿರಿಯ ಸ್ಥಾನಿಯ ವೈದ್ಯರು</td><td>MD(FM)</td><td>ಸಹಾಯಕ ಪ್ರಾಧ್ಯಾಪಕರು</td></tr>
<tr><td>10</td><td>ಡಾ.ಶಿವಕುಮಾರ್ ಸ್ವಾಮಿ ಉದಾಸೀ ಮಠ<br>ಹಿರಿಯ ಸ್ಥಾನಿಯ ವೈದ್ಯರು</td><td>MD(PATH)</td><td>ಸಹಾಯಕ ಪ್ರಾಧ್ಯಾಪಕರು</td></tr>
</table>
ಮೇಲ್ಕಂಡ ವೈದ್ಯರುಗಳು ವೈದ್ಯಕೀಯ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಗೆ ಸರಿಸಮನಾಗಿ ವೇತನ ಮತ್ತು ಇತರೆ ಆರ್ಥಿಕ ಸೌಲಭ್ಯವನ್ನು ನೀಡಬೇಕೆಂದು ಕೋರಿ ಸಲ್ಲಿಸಿರುವ ಮನವಿ ಪತ್ರವನ್ನು ಸಂಸ್ಥೆಯ ನಿರ್ದೇಶಕರು ಸಭೆಗೆ ಮಂಡಿಸಿದರು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಈ ವೈದ್ಯರುಗಳು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ವಿವಿಧ ಬೋಧಕ ಹುದ್ದೆಗಳಿಗೆ ಅರ್ಹತೆ ಹೊಂದಿದ್ದು ಇವರುಗಳ ಬೋಧಕ ಹುದ್ದೆಗಳು ಎಂ.ಸಿ.ಐ. ಪರಿವೀಕ್ಷಣೆಯಲ್ಲಿ ಒಪ್ಪಿಗೆ ಇರುವುದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯ ಬೋಧಕ ಸಿಬ್ಬಂದಿಯವರಿಗೆ ನೀಡುತ್ತಿರುವ ವೇತನ ಹಾಗೂ ಇತರೆ ಭತ್ಯೆಗಳನ್ನು ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ಸಂಸ್ಥೆಯಿಂದ ಪಾವತಿಸಲು ತೀರ್ಮಾನಿಸಲಾಯಿತು ಮತ್ತು ಸದರಿ ವೈದ್ಯರುಗಳು ಹಿಮ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಾಂಕದಿಂದ ಅನ್ವಯವಾಗುವಂತೆ ಸೇವಾ ಅವಧಿಯನ್ನು ಪರಿಗಣಿಸಬಹುದೆಂದು ನಿರ್ಣಯಿಸಿ ಈ ವೈದ್ಯರುಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆದು ನಂತರ ವೇತನವನ್ನು ಪಾವತಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.<br>
ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ
</td></tr>
<tr><td>10</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕರು/ ಕಿರಿಯ ಸ್ಥಾನಿಯ ವೈದ್ಯರುಗಳ ಖಾಯಂ ನೇಮಕಾತಿ ಬಗ್ಗೆ.</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕರು/ ಕಿರಿಯ ಸ್ಥಾನಿಯ ವೈದ್ಯರುಗಳಾಗಿ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳು ತಮ್ಮ ಸೇವೆಯನ್ನು ಖಾಯಂಗೊಳಿಸಿ ಕೊಡಬೇಕೆಂದು ಕೋರಿರುವ ಮನವಿ ಪತ್ರದ ಬಗ್ಗೆ ಚರ್ಚಿಸಲಾಯಿತು. ಈ ಹುದ್ದೆಗಳು ತಾತ್ಕಾಲಿವಾಗಿರುವುದರಿಂದ ಖಾಯಂ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ ಆದರೆ ಇವರ ಸೇವಾಅವಧಿಯನ್ನು ಇಲಾಖಾ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಈಗಿರುವ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಪರಿಗಣಿಸ ಬಹುದೆಂದು ಚರ್ಚಿಸಲಾಯಿತು. ಈ ವಿಷಯದ ಬಗ್ಗೆ ಅಪರ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು ವೈದ್ಯಕೀಯ ನಿರ್ದೇಶನಾಲಯ ಬೆಂಗಳೂರು ಹಾಗೂ ಎಲ್ಲಾ ವೈದ್ಯಕೀಯ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು ಸಭೆ ಸೇರಿ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತೀರ್ಮಾನಿಸಿ ಸದರಿ ಸಮಿತಿಯ ವರದಿ ಬಂದ ನಂತರ ಅಂತಿಮ ತೀರ್ಮಾನ ಕೈಗೊಳ್ಳವುದೆಂದು ವಿಷಯವನ್ನು ಮುಂದೂಡಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 11 | ಶ್ರೀ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಸಂಗ್ರಹಿಸುತ್ತಿರುವ Users Charge ದರವನ್ನು ವೈದ್ಯಕೀಯ ಕಾಲೇಜಿಗೆ ಸರಿಸಮಾನವಾಗುವಂತೆ ಪರಿಷ್ಕರಿಸಲು ಆರೋಗ್ಯ ರಕ್ಷಾ ಸಮಿತಿಯಲ್ಲಿ ಚರ್ಚಿಸಿ ಜಾರಿಗೊಳಿಸುವ ಬಗ್ಗೆ. | ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿಗದಿಪಡಿಸಿರುವಂತೆ ಶುಲ್ಕವನ್ನು ಪಡೆಯಲಾಗುತ್ತಿದೆ ಇದೀಗ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಾಗಿರುವುದರಿಂದ ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಲು Users Charge ದರವನ್ನು ಪರಿಷ್ಕರಿಸುವುದು ಅನಿವಾರ್ಯವಾಗಿರುವುದರಿಂದ ಬೋಧಕ ಆಸ್ಪತ್ರೆಗಳಿಗೆ ವೈದ್ಯಕೀಯ ನಿರ್ದೇಶನಾಲಯದಲ್ಲಿ ನಿಗದಿಪಡಿಸಿರುವ ಶುಲ್ಕವನ್ನು ಪಡೆಯಲು ಅನುಕೂಲವಾಗುವಂತೆ ವಿಷಯವನ್ನು ಆರೋಗ್ಯ ರಕ್ಷಾ ಸಮಿತಿಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಂಡು ಶುಲ್ಕವನ್ನು ಪರಿಷ್ಕರಿಸಲು ಅನುಮೋದನೆ ನೀಡಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 12 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವಿವಿಧ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ವಂತಿಕೆ ಸಂಗ್ರಹಿಸಿರುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಗೆ ವಿವಿಧ ಸಂಘ ಸಂಸ್ಥೆಗಳು ಹಾಗೂ ಸಾರ್ವಜನಿಕರಿಂದ ವಸ್ತುಗಳು ಹಾಗೂ ವಂತಿಕೆಯ ರೂಪದಲ್ಲಿ ಸಂಗ್ರಹಿಸಿರುವುದನ್ನು ಒಪ್ಪಿ ದಾನಿಗಳಿಗೆ ಕೃತಜ್ಞತೆ ಸಲ್ಲಿಸಲಾಯಿತು. ಹೆಚ್ಚಿನ ದೇಣಿಗೆ ಸಂಗ್ರಹಿಸಲು ಅನುಕೂಲವಾಗುವಂತೆ ಲೋಕ ಸಭಾ ಸದಸ್ಯರು, ವಿಧಾನ ಸಭಾ ಸದಸ್ಯರುಗಳಿಂದ ದೇಣಿಗೆ ಪಡೆದು ಸಂಸ್ಥೆಯ ವಿವಿಧ ಅಭಿವೃದ್ದಿಗಳಿಗೆ ಅನುಕೂಲವಾಗುವಂತೆ ಉಪಯೋಗಿಸಿಕೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 13 | ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ಬೆಂಗಳೂರುರವರ ಪೀಠೋಪಕರಣ ಖರೀದಿ ಹಣ ಪಾವತಿಸುವುದರ ಬಗ್ಗೆ. | ಕಾಲೇಜಿನ ಪ್ರಾರಂಭದಲ್ಲಿ ಭಾರತೀಯ ವೈದ್ಯಕೀಯ ಪರಿಷತ್ತಿನ ಪರವೀಕ್ಷಣೆಗೆ ಅವಶ್ಯಕವಿರುವ ಪೀಠೋಪಕರಣಗಳ ತುರ್ತು ಅವಶ್ಯಕತೆಯನ್ನು ಪರಿಗಣಿಸಿ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ, ಬೆಂಗಳೂರು, ಸಂಸ್ಥೆಯಿಂದ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳಿಗೆ 300 ಟೇಬಲ್, 300 ಕುರ್ಚಿ ಮತ್ತು 300ಮಂಚಗಳನ್ನು ಖರೀದಿಸಲಾಗಿರುತ್ತದೆ. ಈ ಪೀಠೋಪಕರಣಗಳು ಉತ್ತಮ ಗುಣಮಟ್ಟದಾಗಿದ್ದು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ವಿದ್ಯಾರ್ಥಿಗಳು ಫೆಬ್ರವರಿ -2008ರಿಂದ ಉಪಯೋಗಿಸುತ್ತಿದ್ದಾರೆ. ಪೀಠೋಪಕರಣಗಳ ಒಟ್ಟು ಖರೀದಿ ಮೊತ್ತ ರೂ.42,72,321.00ಗಳಾಗಿದ್ದು 2007-08ನೇ ಸಾಲಿನಲ್ಲಿ ರೂ.23,35,794.00ಗಳನ್ನು ಪಾವತಿ ಮಾಡಿದ್ದು ಅನುದಾನದ ಕೊರತೆಯಿಂದ ರೂ.19,36,527.00 ಗಳನ್ನು ಪಾವತಿಸಿರುವುದಿಲ್ಲ ಈ ಬಾಕಿ ಬಾಬ್ತನ್ನು ಪಾವತಿಸಲು ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಕಡತವನ್ನು ಸಲ್ಲಿಸಲಾಗಿತ್ತು. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯವರು ಪತ್ರ ಸಂಖ್ಯೆ: ಆ.ಇ.: 2081 ವೆಚ್ಚ: 5/2008, ಆರ್ಥಿಕ ಇಲಾಖೆ (ವೆಚ್ಚ -5), ದಿನಾಂಕ: 18-10-2008 ಪತ್ರದಲ್ಲಿ ಕೆಟಿಪಿಪಿ ಕಾಯ್ದೆ ನಿಯಮಗಳನ್ನು ಅನುಸರಿಸಿರುವುದಿಲ್ಲ ಹಾಗೂ ಕೆಎಸ್ ಎಫ್ ಐಸಿ ಇವರಿಂದ ನೇರವಾಗಿ ಖರೀದಿಸಲು ವಿನಾಯಿತಿ ಇರುವುದಿಲ್ಲವೆಂದು ತಿಳಿಸಿ ಬಿಲ್ ಪಾವತಿಸಲು ಆರ್ಥಿಕ ಇಲಾಖೆಯಿಂದ ಅನುಮತಿ ದೊರಕಿಲ್ಲವೆಂದು ಮತ್ತು ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಯಮದವರು ಲೀಗಲ್ ನೋಟೀಸ್ ಜಾರಿಗೊಳಿಸಿರುವುದನ್ನು ಸಂಸ್ಥೆಯ ನಿರ್ದೇಶಕರು ಸಭೆಗೆ ವಿವರಿಸಿದರು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ತುರ್ತು ಅವಶ್ಯಕತೆ ಇದ್ದರಿಂದ ಹಾಗೂ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಯಮವು ಸರ್ಕಾರಿ ಸ್ವಾಯತ್ತಸಂಸ್ಥೆಯಾಗಿದ್ದರಿಂದ ಹಿಂದಿನ ಪ್ರಾಂಶುಪಾಲರು ಪೀಠೋಪಕರಣಗಳನ್ನು ಖರೀದಿಸಿದ್ದು ಹಾಗೂ ಇವುಗಳ ಗುಣಮಟ್ಟವು ತೃಪ್ತಿದಾಯವಾಗಿ ರುವುದನ್ನು ಸಭೆಯಲ್ಲಿ ಒಪ್ಪಿ ಬಿಲ್ ಬಾಕಿ ಪಾವತಿಸಲು ಅನುಮೋದನೆ ನೀಡಲಾಯಿತು. ಈ ಬಗ್ಗೆ ಸರ್ಕಾರಕ್ಕೆ ಪತ್ರವನ್ನು ಬರೆದು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ನಂತರ ಹಣ ಪಾವತಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 14 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2009-10ನೇ ಸಾಲಿನಲ್ಲಿ ಅರೆ ವೈದ್ಯಕೀಯ ಕೋರ್ಸ್‌ಗಳಾದ ಪ್ರಯೋಗಾಲಯ ತಂತ್ರಜ್ಞರು / ಕ್ಷ-ಕಿರಣ ತಂತ್ರಜ್ಞರು/ ಓ.ಟಿ. ಟೆಕ್ನಿಷಿಯನ್ ಹಾಗೂ ಹೆಲ್ತ್ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 2009-10ನೇ ಸಾಲಿನಲ್ಲಿ ಅರೆ ವೈದ್ಯಕೀಯ ಕೋರ್ಸ್‌ಗಳಾದ ಪ್ರಯೋಗಾಲಯ ತಂತ್ರಜ್ಞರು / ಕ್ಷ-ಕಿರಣ ತಂತ್ರಜ್ಞರು/ ಓ.ಟಿ. ಟೆಕ್ನಿಷಿಯನ್ ಹಾಗೂ ಹೆಲ್ತ್ ಇನ್‌ಸ್ಪೆಕ್ಟರ್ ಕೋರ್ಸ್‌ಗಳನ್ನು ಪ್ರಾರಂಭಿಸಲು (ಪ್ರತಿ ಕೋರ್ಸ್‌ಗೆ 20 ವಿದ್ಯಾರ್ಥಿಗಳ ಪ್ರವೇಶಾತಿಗಾಗಿ) ಸರ್ಕಾರದ ಆದೇಶ ಸಂಖ್ಯೆ: ಆಕುಕ:57:ಎಂಎಂಇ :2008, ಬೆಂಗಳೂರು ದಿನಾಂಕ: 10-07-2008ರಲ್ಲಿ ಅನುಮತಿ ದೊರಕಿದ್ದು ಪ್ರಸ್ತುತ ಸಾಲಿನಲ್ಲಿ ಮೇಲ್ಕಂಡ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮೋದಿಸಲಾಯಿತು. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಬೋಧನಾ ವ್ಯವಸ್ಥೆ ಕಲ್ಪಿಸಲು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | ಇನ್‌ಸ್ಪೆಕ್ಟರ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ದೊರಕಿರುವ ಬಗ್ಗೆ. | ಸಂಸ್ಥೆಯಲ್ಲಿ ಸೇವೆಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರನ್ನು ಬಳಸಿಕೊಂಡು ಗೌರವಧನ ಪಾವತಿಸಬಹುದೆಂದು ಹಾಗೂ ಸಂಸ್ಥೆಯಲ್ಲಿ ಲಭ್ಯವಿಲ್ಲದ ಬೋಧಕರನ್ನು ಅಗತ್ಯವಿದ್ದಲ್ಲಿ ಅರೆಕಾಲಿಕ ಆಧಾರದಲ್ಲಿ ನೇಮಕ ಮಾಡಿಕೊಂಡು ಗೌರವಧನ ನೀಡಲು ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ:ನಿರ್ದೇಶಕರು, ಹಿಮ್ಸ್, ಹಾಸನ** |
| 15 | ಡಯಾಲಿಸಿಸ್ ಘಟಕ ಪ್ರಾರಂಭಿಸಲು ಟೆಕ್ನಿಷಿಯನ್ ಹುದ್ದೆಯನ್ನು ಭರ್ತಿ ಮಾಡಿಕೊಳ್ಳುವ ಬಗ್ಗೆ. | ಅ) ದಿನಾಂಕ:16-07-2009ರಂದು ನಡೆದ ಆರ್ಥಿಕ ಸಮಿತಿ ಸಭೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ ಅನುಮೋದನೆ ಪಡೆಯಲಾಗಿರುತ್ತದೆ. ದಿನಾಂಕ: 21-07-2009ರಂದು ತಾಂತ್ರಿಕ ಬಿಡ್ ತೆರೆಯಲಾಗಿದ್ದು, ಪ್ರಾತ್ಯಕ್ಷತೆ ಪಡೆದು ನಿಯಾಮಾನುಸಾರ ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಖರೀದಿಸಲಾಗುತ್ತಿರುವುದರ ಬಗ್ಗೆ ನಿರ್ದೇಶಕರು ಸಭೆಗೆ ಮಂಡಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. ತುರ್ತು ಅವಶ್ಯಕತೆ ಇರುವುದರಿಂದ ಪ್ರೈಸ್ ಬಿಡ್ ತೆರೆದು ಮಾನ್ಯ ಜಿಲ್ಲಾಧಿಕಾರಿಯವರಿಂದ ಅನುಮೋದನೆ ಪಡೆದು ಸರಬರಾಜು ಆದೇಶ ನೀಡುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. ಈ ಡಯಾಲಿಸಿಸ್ ಘಟಕಗಳ ನಿರ್ವಹಣೆಗೆ ಡಯಾಲಿಸಿಸ್ ಟೆಕ್ನಿಷಿಯನ್ ಅವಶ್ಯಕವಿರುವುದರಿಂದ ಸರ್ಕಾರವು ಮಂಜೂರು ಮಾಡಿರುವ 58 ಟೆಕ್ನಿಷಿಯನ್ ಹುದ್ದೆಗಳ ಪೈಕಿ ಇದರಲ್ಲಿ ನಾಲ್ಕು ಡಯಾಲಿಸಿಸ್ ಟೆಕ್ನಿಷಿಯನ್ ನೇಮಕಾತಿಗಾಗಿ ಅನುಮೋದನೆ ನೀಡಿ ಈಗಾಗಲೇ ನೇಮಕಾತಿ ಪ್ರಕ್ರಿಯೆ ಬಗ್ಗೆ ಪ್ರಕಟಣೆ ನೀಡುತ್ತಿರುವುದರಿಂದ ಈ ನೇಮಕಾತಿಯನ್ನು ಸಹ ಅದರಡಿಯಲ್ಲಿಯೇ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ**<br>ಆ) ಆರೋಗ್ಯ ಸೇವೆಯು ಅಗತ್ಯ ಸೇವೆಗೆ ಒಳಪಡುವುದರಿಂದ ತುರ್ತು ಸಂದರ್ಭಗಳಲ್ಲಿ ಅಗತ್ಯವಿರುವ ಉಪಕರಣಗಳನ್ನು ಸರ್ಕಾರದಿಂದ ಅನುಮತಿ ಪಡೆದು ಖರೀದಿಸುವುದು ವಿಳಂಬವಾಗುವುದರಿಂದ ಜಿಲ್ಲಾಧಿಕಾರಿಯವರ ವ್ಯಾಪ್ತಿಯಲ್ಲಿ ರೂ.20.00ಲಕ್ಷಗಳವರೆಗೆ ಖರೀದಿಸಲು ಅನುಮತಿ ನೀಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಗೆ ಮಂಡಿಸಿದರು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಸಾರ್ವಜನಿಕ ಪಾರದರ್ಶಕ ನಿಯಮದಡಿ ಅಗತ್ಯವಿರುವ ಉಪಕರಣಗಳನ್ನು ರೂ.20.00ಲಕ್ಷಗಳು ಮೀರದಂತೆ ಜಿಲ್ಲಾಧಿಕಾರಿಯವರಿಂದ ಅನುಮೋದನೆ ಪಡೆದು ಖರೀದಿಸಿ ನಂತರ ಮುಂದಿನ ಖರೀದಿ ಸಮಿತಿಯಲ್ಲಿ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | ಅನುಮೋದನೆ ಪಡೆದುಕೊಳ್ಳುವಂತೆ ಸೂಚಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 16 | ರಾಜೀನಾಮೆ ಸಲ್ಲಿಸಿರುವ ಸಿಬ್ಬಂದಿಗಳ ರಾಜೀನಾಮೆ ಪತ್ರವನ್ನು ಅಂಗೀಕರಿಸುವುದು. | ಅ)ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಈ ಕೆಳಕಂಡ ಬೋಧಕ ಸಿಬ್ಬಂದಿಯವರು ವೈಯಕ್ತಿಕ ನೆಲೆಯಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವುದರಿಂದ ಸದರಿ ಸಿಬ್ಬಂದಿಯವರ ರಾಜೀನಾಮೆ ಪತ್ರವನ್ನು ಅಂಗೀಕರಿಸಲಾಯಿತು. |

| ಕ್ರಮ ಸಂಖ್ಯೆ | ಬೋಧಕ ಸಿಬ್ಬಂದಿಯವರ ಹೆಸರು | ಸಂಸ್ಥೆಗೆ ಸೇರಿದ ದಿನಾಂಕ | ಸಂಸ್ಥೆಯಿಂದ ಬಿಡುಗಡೆಗೊಂಡ ದಿನಾಂಕ |
|---|---|---|---|
| 1 | ಡಾ. ಉದಯ್ ಶಂಕರ್,<br>ಪ್ರಾಧ್ಯಾಪಕರು<br>ಶಸ್ತ್ರ ಚಿಕಿತ್ಸಾ ವಿಭಾಗ | 01.06.2006 | 16.10.2008 |
| 2 | ಡಾ. ದಯಾನಂದ ಹೆಚ್.ವಿ.<br>ಪ್ರಾಧ್ಯಾಪಕರು<br>ಮೂಳೆ ಮತ್ತು ಕೀಲು ವಿಭಾಗ | 20.03.2007 | 13.10.2008 |
| 3 | ಡಾ. ಕೃಷ್ಣಮೂರ್ತಿ ಅಡಿಗ<br>ಸಹ ಪ್ರಾಧ್ಯಾಪಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 21.03.2007 | 31.10.2008 |
| 4 | ಡಾ. ಶ್ರೀನಿವಾಸ ಆರ್. ದೇಶಪಾಂಡೆ<br>ಸಹ ಪ್ರಾಧ್ಯಾಪಕರು,<br>ಜೀವ ರಸಾಯನ ಶಾಸ್ತ್ರ ವಿಭಾಗ | 22.01.2007 | 21.01.2008 |
| 5 | ಡಾ. ಅಬ್ದುಲ್ ಬಷೀರ್<br>ಸಹಾಯಕ ಪ್ರಾಧ್ಯಾಪಕರು,<br>ಮೂಳೆ ಮತ್ತು ಕೀಲು ವಿಭಾಗ | 01.06.2006 | 12.03.2008 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | | |

| | | | |
|---|---|---|---|
| 6 | ಡಾ.ಕಿಶೋರಿ<br>ಸಹಾಯಕ ಪ್ರಾಧ್ಯಾಪಕರು<br>ಪ್ರಸ್ತುತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ | 19.10.2006 | 16.07.2009 |
| 7 | ಡಾ. ಸೋಮಶೇಖರ್ ಎಸ್.ಸಿ.<br>ಸಹಾಯಕ ಪ್ರಾಧ್ಯಾಪಕರು,<br>ಔಷಧ ಶಾಸ್ತ್ರ ವಿಭಾಗ | 30.10.2006 | 30.07.2009 |
| 8 | ಡಾ. ಪಾಲಕ್ಷ.ಎಸ್.<br>ಸಹಾಯಕ ಪ್ರಾಧ್ಯಾಪಕರು,<br>ರೋಗ ಲಕ್ಷಣ ಶಾಸ್ತ್ರ ವಿಭಾಗ | 18.02.2006 | 31.10.2008 |
| 9 | ಡಾ. ಮಂಜುಳ .ಆರ್.<br>ಸಹಾಯಕ ಪ್ರಾಧ್ಯಾಪಕರು,<br>ಅರವಳಿಕೆ ವಿಭಾಗ | 03.01.2007 | 28.02.2008 |
| 10 | ಡಾ. ವಾಸು ಬಿ.ಎನ್.<br>ಸಹಾಯಕ ಪ್ರಾಧ್ಯಾಪಕರು,<br>ನೇತ್ರ ಚಿಕಿತ್ಸಾ ವಿಭಾಗ | 22.03.2007 | 01.06.2008 |
| 11 | ಡಾ. ಬದೂರಿ ಶ್ರೀನಿವಾಸ ರೆಡ್ಡಿ<br>ಹಿರಿಯ ಸ್ಥಾನಿಯ ವೈದ್ಯರು,<br>ಶಸ್ತ್ರ ಚಿಕಿತ್ಸಾ ವಿಭಾಗ | 15.05.2007 | 06.08.2008 |
| 12 | ಡಾ. ಪಾಲಕ್ಷ ಹೆಚ್.ಕೆ.<br>ಹಿರಿಯ ಸ್ಥಾನಿಯ ವೈದ್ಯರು<br>ಮಕ್ಕಳ ಚಿಕಿತ್ಸಾ ವಿಭಾಗ | 06.10.2006 | 29.09.2007 |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|

| | | | |
|---|---|---|---|
| 13 | ಡಾ. ಶಿವು .ಪಿ<br>ಹಿರಿಯ ಸ್ಥಾನಿಯ ವೈದ್ಯರು,<br>ಮಕ್ಕಳ ಚಿಕಿತ್ಸಾ ವಿಭಾಗ | 06.06.2007 | 28.02.2009 |
| 14 | ಡಾ. ಪ್ರೇಮ್ ಕುಮಾರ್ .ಕೆ.<br>ಹಿರಿಯ ಸ್ಥಾನಿಯ ವೈದ್ಯರು,<br>ಶಸ್ತ್ರ ಚಿಕಿತ್ಸಾ ವಿಭಾಗ | 01.10.2007 | 29.02.2008 |
| 15 | ಡಾ. ವಿಜಯ್ ಸಾರಥಿ<br>ಹಿರಿಯ ಸ್ಥಾನಿಯ ವೈದ್ಯರು,<br>ರೇಡಿಯೋಲಜಿ ವಿಭಾಗ, | 05.12.2008 | 02.06.2009 |
| 16 | ಡಾ. ಧನಂಜಯ ಭಟ್<br>ಗೌರವಾನ್ವಿತ ,ನ್ಯೂರಲಾಜಿಸ್ಟ್ | 05.10.2006 | 31.01.2007 |

**ಆ)** ಡಾ. ಕಿಶೋರಿ. ಸಹಾಯಕ ಪ್ರಾಧ್ಯಾಪಕರು, ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ವಿಭಾಗ ಇವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವುದನ್ನು ಅಂಗೀಕರಿಸಲಾಯಿತು. ಸದರಿ ವೈದ್ಯರು ದಿನಾಂಕ:30.09.2008 ರಿಂದ ದಿನಾಂಕ:15.07.2009ರವರೆಗೆ ಗೈರು ಹಾಜರಾಗಿದ್ದು, ಅವರಗೈರು ಹಾಜರಿಯ ಅವಧಿಗೆ Medical Boardನಿಂದ ಸೂಕ್ತವಾದ ವೈದ್ಯಕೀಯ ದಾಖಲೆಯನ್ನು ನೀಡದೇ ಇರುವುದರಿಂದ ಈ ಗೈರು ಹಾಜರಿಯ ಅವಧಿಗೆ ಸೇವಾನುಭವ ಪತ್ರವನ್ನು ನೀಡದಿರುವಂತೆ ಮತ್ತು ಸದರಿ ಗೈರು ಹಾಜರಿ ಅವಧಿಯನ್ನು ಅನಧಿಕೃತ ಗೈರು ಹಾಜರಿಯೆಂದು ಘೋಷಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಲಾಯಿತು.

**ಇ)** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿದ್ದ ಈ ಕೆಳಕಂಡ ಬೋಧಕೇತರ ಸಿಬ್ಬಂದಿಯವರು ವೈಯಕ್ತಿಕ ನೆಲೆಯಲ್ಲಿ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವುದರಿಂದ ಸದರಿ ಸಿಬ್ಬಂದಿಯವರ ರಾಜೀನಾಮೆ ಪತ್ರವನ್ನು ಅಂಗೀಕರಿಸಲಾಯಿತು.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><th>ಕ್ರಮ ಸಂಖ್ಯೆ</th><th>ಬೋಧಕೇತರ ಸಿಬ್ಬಂದಿಯವರ ಹೆಸರು</th><th>ಸಂಸ್ಥೆಗೆ ಸೇರಿದ ದಿನಾಂಕ</th><th>ಸಂಸ್ಥೆಯಿಂದ ಬಿಡುಗಡೆಗೊಂಡ ದಿನಾಂಕ</th></tr>
<tr><td>1</td><td>ಮಂಜುನಾಥ್. ಹೆಚ್.<br>ಫಾರ್ಮಸಿಟಿಕಲ್ ಕೆಮಿಸ್ಟ್</td><td>30.03.2007</td><td>05.07.2007</td></tr>
<tr><td>2</td><td>ಸಿ.ಆರ್. ವೆಂಕಟೇಶ್ ,<br>ಗ್ರೂಪ್ `ಡಿ`</td><td>23.02.2007</td><td>17.04.2009</td></tr>
</table>
ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ
</td></tr>
<tr><td>17</td><td>ಅನಧಿಕೃತ ಗೈರು ಹಾಜರಾಗಿರುವ ಸಿಬ್ಬಂದಿಯವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವುದರ ಬಗ್ಗೆ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ತಾತ್ಕಲಿಕವಾಗಿ ಸೇವೆ ಸಲ್ಲಿಸುತ್ತಿದ್ದ ಈ ಕೆಳಕಂಡ ಸಿಬ್ಬಂದಿಯವರು ಸಕಾರಣವಿಲ್ಲದೆ ಅನಧಿಕೃತ ಗೈರು ಹಾಜರಾಗಿರುವುದರ ಬಗ್ಗೆ ಚರ್ಚಿಸಿ ಸದರಿ ನೌಕರರು ಹಂಗಾಮಿ ನೌಕರಾಗಿದ್ದು, KCSR ನಿಯಮಾವಳಿಗಳ ಪ್ರಕಾರ ವಿಚಾರಣೆಗೆ ಅವಕಾಶವಿಲ್ಲವೆಂದು ಪರಿಗಣಿಸಿ ಇವರುಗಳನ್ನು ಈ ಕೂಡಲೇ ಸಂಸ್ಥೆಯಿಂದ ಬಿಡುಗಡೆಗೊಳಿಸುವಂತೆ ತೀರ್ಮಾನಿಸಲಾಯಿತು.
<table>
<tr><th>ಕ್ರಮ ಸಂಖ್ಯೆ</th><th>ಬೋಧಕೇತರ ಸಿಬ್ಬಂದಿಯವರ ಹೆಸರು</th><th>ಸಂಸ್ಥೆಗೆ ಸೇರಿದ ದಿನಾಂಕ</th><th>ಸಂಸ್ಥೆಯಿಂದ ಬಿಡುಗಡೆಗೊಂಡ ದಿನಾಂಕ</th></tr>
<tr><td>1</td><td>ಹೇಮಂತ್ ಕುಮಾರ್<br>ಲ್ಯಾಬ್ ಟೆಕ್ನಿಷಿಯನ್</td><td>19.09.2006</td><td>05.05.2008</td></tr>
<tr><td>2</td><td>ಜಯಣ್ಣ ಹೆಚ್.ಎಸ್.<br>ಗ್ರೂಪ್ `ಡಿ`</td><td>15.11.2006</td><td>01.02.2008</td></tr>
<tr><td>3</td><td>ಗೀತಾ ಹೆಚ್.ಎನ್.<br>ಪ್ರಥಮ ದರ್ಜೆ ಸಹಾಯಕರು</td><td>22.11.2006</td><td>ಜೂನ್ .2008</td></tr>
<tr><td>4</td><td>ಉಷಾ .ಜೆ.<br>ಪ್ರಥಮ ದರ್ಜೆ ಸಹಾಯಕರು</td><td>20.12.2006</td><td>23.05.2009</td></tr>
</table>
</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ. ಸಂ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>
<table>
<tr><td>5</td><td>ಕನಕ ಲಕ್ಷ್ಮೀ .ವಿ.ಕೆ.<br>ಗ್ರೂಪ್ `ಡಿ`</td><td>10.01.2007</td><td>ಫೆಬ್ರವರಿ -2007</td></tr>
<tr><td>6</td><td>ನರೇಂದ್ರ .ಎನ್.<br>ಕ್ಷ -ಕಿರಣ ತಂತ್ರಜ್ಞರು</td><td>05.01.2007</td><td>31.03.2007</td></tr>
<tr><td>7</td><td>ಸತೀಶ್ ಕುಮಾರ್ ಸಿ.ಬಿ.<br>ಲ್ಯಾಬ್ ಟೆಕ್ನಿಷಿಯನ್</td><td>15.02.2007</td><td>01.12.2007</td></tr>
<tr><td>8</td><td>ಪಿಂಟು ಕುಮಾರ್<br>ಆಡಿಯಾಲಾಜಿಸ್ಟ್</td><td>21.05.2007</td><td>ಸೆಪ್ಟಂಬರ್ -2007</td></tr>
</table>
9. ಮಂಜುನಾಥ್ .ಕೆ.ಜೆ., ಫೋಟೋಗ್ರಾಫರ್, ಇವರು ಹಂಗಾಮಿ ನೌಕರರಾಗಿದ್ದು, ಸದರಿ ನೌಕರರು ಕರ್ತವ್ಯದಲ್ಲಿ ಹಲವಾರು ಲೋಪವೆಸಗಿರುವುದನ್ನು ಒಪ್ಪಿಕೊಂಡಿರುತ್ತಾರೆ ಹಾಗೂ ಹುದ್ದೆಗೆ ಅವಶ್ಯವಿರುವ ವಿದ್ಯಾರ್ಹತೆ ಹೊಂದಿಲ್ಲದಿರುವುದರಿಂದ ಇವರ ನೇಮಕಾತಿ ಮತ್ತುನಡವಳಿಕೆ ಸಮರ್ಥನೀಯವಲ್ಲದ ಕಾರಣಗಳಿಂದಾಗಿ ಇವರನ್ನು 28.04.2009ರಿಂದ ಅನ್ವಯವಾಗುವಂತೆ, ನೌಕರನ ಹುದ್ದೆಯ ಸೇವೆಯಿಂದ ಯಾವುದೇ ಪರಿಹಾರವಿಲ್ಲದೆ ವಜಾಗೊಳಿಸಿ, ಬಿಡುಗಡೆಮಾಡಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು.<br>
ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ</td></tr>
<tr><td>18</td><td>ಎಮ್.ಸಿ.ಐ./ಎಲ್.ಐ.ಸಿ. ಹಾಗೂ ಇತರೆ ಪರಿವೀಕ್ಷಣೆಗೆ ಆಗಮಿಸುವ ಪರಿವೀಕ್ಷಕರ ಖರ್ಚು ವೆಚ್ಚಗಳ ಬಗ್ಗೆ.</td><td>ಭಾರತೀಯ ವೈದ್ಯಕೀಯ ಪರಿಷತ್, (ಎಮ್.ಸಿ.ಐ.) ನವದೆಹಲಿ /ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಬೆಂಗಳೂರು, (ಎಲ್.ಐ.ಸಿ). ಹಾಗೂ ಇತರೆ ಅತಿಥಿಗಳು ಸಂಸ್ಥೆಯ ಪರಿವೀಕ್ಷಣೆಗೆ ಆಗಮಿಸುವ ಸಮಯದಲ್ಲಿ ಪರಿವೀಕ್ಷಕರ ಸಾರಿಗೆ , ವಸತಿ ಸೌಕರ್ಯ ಮತ್ತು ಇತರೆ ಖರ್ಚು ವೆಚ್ಚಗಳನ್ನು ರೂ.1.00ಲಕ್ಷ ಮೀರದಂತೆ ಸಂಸ್ಥೆ ನಿಧಿಯಿಂದ ಭರಿಸಲು ತೀರ್ಮಾನಿಸಲಾಯಿತು.<br>
ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ</td></tr>
<tr><td>19</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಂಚಿತ ವೇತನದಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಸಂಚಿತ ವೇತನದಲ್ಲಿ ಸೇವೆ ಸಲ್ಲಿಸುತ್ತಿರುವ 127 ಬೋಧಕೇತರ ಸಿಬ್ಬಂದಿಯವರು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಸಂಸ್ಥೆಗೆ ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮಗಳ ನೇಮಕಾತಿಯನ್ನು ಖಾಯಂಗೊಳಿಸಬೇಕೆಂದು ಸಲ್ಲಿಸಿದ್ದ ಮನವಿಪತ್ರದ</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | ಸಿಬ್ಬಂದಿಯವರ ಮನವಿ ಪತ್ರದ ಬಗ್ಗೆ. | ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಸಿಬ್ಬಂದಿಯವರು ಸಂಸ್ಥೆಯ ಪ್ರಾರಂಭದಿಂದ ಸೇವೆ ಸಲ್ಲಿಸುತ್ತಿರುವುದನ್ನು ಪರಿಗಣಿಸಿ ಖಾಯಂ ನೇಮಕಾತಿ ಸಂದರ್ಭದಲ್ಲಿ ಸದರಿ ನೌಕರರುಗಳಿಗೆ ನಿಯಮಾನುಸಾರ ಅದ್ಯತೆ ನೀಡುವುದೆಂದು ತೀರ್ಮಾನ ಕೈಗೊಳ್ಳಲಾಯಿತು.<br>ಸರ್ಕಾರದ ಆದೇಶ ಸಂಖ್ಯೆ: ಆಕುಕ 266:ಎಂಪಿಎಸ್:2006, ದಿನಾಂಕ:12-092006 ರ ಆದೇಶದಲ್ಲಿ ಒಟ್ಟು 507ಬೋಧಕೇತರ ಹುದ್ದೆಗಳಿಗೆ ಮಂಜೂರಾತಿ ದೊರಕಿದ್ದು ಪ್ರಸಕ್ತ ಸಾಲಿಗೆ ಅವಶ್ಯವಿರುವ ಬೋಧಕೇತರ ಹುದ್ದೆಗಳಿಗೆ ಪತ್ರಿಕಾ ಪ್ರಕಟಣೆ ನೀಡಿ ಖಾಯಂ ನೇಮಕಾತಿ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. ಆಯ್ಕೆ ಪ್ರಕ್ರಿಯೆಯಲ್ಲಿ ಹುದ್ದೆಗೆ ನಿಗದಿ ಪಡಿಸಿರುವ ಅರ್ಹ ವಿದ್ಯಾರ್ಹತೆಯ ಸರಾಸರಿ ಅಂಕಗಳಲ್ಲಿ 75 ಭಾಗ ಮತ್ತು ಸಂದರ್ಶನಕ್ಕೆ 25 ಅಂಕಗಳನ್ನು ನಿಗದಿಪಡಿಸಿ ನೇಮಕ ಮಾಡಿಕೊಳ್ಳುವಂತೆ ತೀರ್ಮಾನಿಸಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |
| 20 | ಅಧ್ಯಕ್ಷರ ಅಪ್ಪಣೆ ಮೇಲೆ ಇತರೆ ವಿಷಯಗಳು.<br>ಅ) ಹಿಮ್ಸ್‌ನ ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಶ್ರೀ ವಿವೇಕಾನಂದ ಯೂತ್ ಮೂಮೆಂಟ್ ಸರಗೂರು, ಇವರ ಸಹಯೋಗದಲ್ಲಿ Community Care Centre ಅನ್ನು ಪ್ರಾರಂಭಿಸಿರುವುದರ ಬಗ್ಗೆ. | ಅ)ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯಾದ ಶ್ರೀ ಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಶ್ರೀ ವಿವೇಕಾನಂದ ಯೂತ್ ಮೂಮೆಂಟ್, ಸರಗೂರು ಇವರ ಸಹಯೋಗದಲ್ಲಿ Community Care Centreಅನ್ನು ಪ್ರಾರಂಭಿಸಲಾಗಿದ್ದು ಇದರಡಿಯಲ್ಲಿ NACO Funded Project ವತಿಯಿಂದ KSAPSರವರಿಂದ ವಾರ್ಷಿಕ ರೂ.10.00 ರಿಂದ 14.00 ಲಕ್ಷಗಳ ಆರ್ಥಿಕ ಸಹಾಯ ಸಂಸ್ಥೆಗೆ ದೊರಕುವುದರ ಬಗ್ಗೆ ಚರ್ಚಿಸಲಾಯಿತು. ಸಾರ್ವಜನಿಕ ಹಿತ ದೃಷ್ಟಿಯಿಂದ ಏಡ್ಸ್ ರೋಗಿಗಳಿಗೆ ಸಂಬಂಧಿಸಿದಂತಹ ಮಾಹಿತಿ ಮತ್ತು ಉಪಚಾರವನ್ನು ನೀಡಲಾಗುತ್ತಿದ್ದು, Community Care Centre ಪ್ರಾರಂಭಿಸಿರುವುದನ್ನು ಒಪ್ಪಿ ಅನುಮೋದಿಸಲಾಯಿತು. |
| | ಆ) ಆಸ್ಪತ್ರೆ ಮತ್ತು ಕಾಲೇಜಿನಲ್ಲಿ CC TV ಮತ್ತು ಬಯೋಮೆಟ್ರಿಕ್ಸ್ ಅನ್ನು ಅಳವಡಿಸಿರುವುದನ್ನು | ಆ)ಹಿಮ್ಸ್‌ನ ಆಸ್ಪತ್ರೆ ಮತ್ತು ಕಾಲೇಜಿನ ಆಡಳಿತ ಸುಧಾರಣೆಯ ದೃಷ್ಟಿಯಿಂದ 16, CCTV, Pointsಗಳನ್ನು ಅಳವಡಿಸಿದ್ದು ಕಾಲೇಜಿನ ಆಟದ ಮೈದಾನವನ್ನು ವಸ್ತು ಪ್ರದರ್ಶನಕ್ಕೆ ಬಾಡಿಗೆ ನೀಡಿ ಬಂದ ರೂ.2.70ಲಕ್ಷ ರೂ. 2.00ಲಕ್ಷ ವೆಚ್ಚದಲ್ಲಿ CCTV ಖರೀದಿಸಿ ಅಳವಡಿಸಿರುವುದನ್ನು ಒಪ್ಪಿ ಅಂಗೀಕರಿಸಲಾಯಿತು. ಮತ್ತು |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ. ಸಂ | ವಿಷಯ | ತೀರ್ಮಾನ |
|---|---|---|
| | ಅನುಮೋದಿಸುವ ಬಗ್ಗೆ. | ಇನ್ನೂ 10 CCTV ಮತ್ತು 02 ಬಯೋಮೆಟ್ರಿಕ್ಸ್ ಅವಶ್ಯಕತೆ ಇರುವುದನ್ನು ಚರ್ಚಿಸಿ ಸಂಸ್ಥೆಯ ನಿಧಿಯಿಂದ ಖರೀದಿಸಲು ಅನುಮೋದನೆ ನೀಡಲಾಯಿತು. ಕೂಡಲೇ ಖರೀದಿಸಿ ಅಳವಡಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| | ಇ) ಹಾಸನ ಸರ್ಕಾರಿ ನರ್ಸಿಂಗ್ ಕಾಲೇಜನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸೇರಿಸುವುದರ ಬಗ್ಗೆ | ಇ) ಹಾಸನ ಸರ್ಕಾರಿ ನರ್ಸಿಂಗ್ ಕಾಲೇಜಿನ ಆಡಳಿತ ಸುಧಾರಣೆ ಹಿತದೃಷ್ಟಿಯಿಂದ ನರ್ಸಿಂಗ್ ಕಾಲೇಜಿನ ಆಡಳಿತ ಮೇಲ್ವಿಚಾರಣೆಯನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಡಿಯಲ್ಲಿ ತರುವುದು ಸೂಕ್ತವೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸಭೆಗೆ ಮಂಡಿಸಿದರು, ಆದರೆ ಸಂಸ್ಥೆಯ ನಿರ್ದೇಶಕರು ಹಣಕಾಸಿನ ನಿರ್ವಹಣೆಯನ್ನು ಪ್ರಸ್ತುತ ಇರುವಂತೆ ನಿರ್ದೇಶಕರು, ವೈದ್ಯಕೀಯ ನಿರ್ದೇಶನಾಲಯ, ಬೆಂಗಳೂರು ಇವರ ವ್ಯಾಪ್ತಿಯಲ್ಲಿಯೇ ಇರುವುದು ಸೂಕ್ತವೆಂದೂ, ನರ್ಸಿಂಗ್ ಶಾಲೆಯ ಆಡಳಿತ ಮೇಲ್ವಿಚಾರಣೆಯನ್ನು ಮಾತ್ರ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಡಿಯಲ್ಲಿ ತರಬಹುದೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಇದರ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಸರ್ಕಾರದಿಂದ ಆದೇಶ ಹೊರಡಿಸುವಂತೆ ತೀರ್ಮಾನ ಕೈಗೊಳ್ಳಲಾಯಿತು.<br>**ಕ್ರಮ: ನಿರ್ದೇಶಕರು, ಹಿಮ್ಸ್, ಹಾಸನ** |

**(ಡಾ.ಕೆ.ಎಸ್. ಗಂಗಾಧರ)**
ಸದಸ್ಯ ಕಾರ್ಯದರ್ಶಿ
ಹಾಗೂ ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

**(ವಿ.ಉಮೇಶ್, ಭಾ.ಆ.ಸೇ)**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ವೈಶಿ)
ಕರ್ನಾಟಕ ಸರ್ಕಾರ,ಬೆಂಗಳೂರು ಹಾಗೂ
ಉಪಾಧ್ಯಕ್ಷರು, ಆಡಳಿತ ಮಂಡಳಿ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

**( ರಾಮಚಂದ್ರಗೌಡ)**
ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ,ಬೆಂಗಳೂರು ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ